# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

# ಎಸ್.ಸಿ.ನಂ.04/2021

ಫಿರ್ಯಾದಿದಾರಃ ಸರ್ಕಾರ - ಮುಂಡರಗಿ ಪೊಲೀಸ ಠಾಣೆ

-ವಿರುದ್ಧ-

ಆರೋಪಿಃ 2) ಶಶಿಧರ ಮಹಾಲಿಂಗಪ್ಪ ಕವಳಿಕಾಯಿ ಉರ್ಫ ಮ್ಯಾಗೇರಿ.

***

## ದಂಡಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ.

ಪ್ರಶ್ನೆ **1 -** ಈ ನ್ಯಾಯಾಲಯದಲ್ಲಿ ವಿಚಾರಣೆಯಾದ ಸಾಕ್ಷಿದಾರರು ನೀಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ **2 –** ಫ್ರಾಸಾ-**1** ರಾಮಪ್ಪ ಹೈಗರ ಇವರು ತಮ್ಮ ಸಾಕ್ಷಿಯಲ್ಲಿ, ಗುನ್ನಾ ಜಾಗೆ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-1 ಎಂದು, ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು, ಈಗ ಸುಮಾರು ಮೂರು ವರ್ಷಗಳ ಹಿಂದೆ, ಅತ್ತಿಕಟ್ಟಿ ಗ್ರಾಮದ ಚಾಸಾ-8 ರವರ ಜಾಗದ ಹತ್ತಿರ ನಿಪಿ-1 ಕ್ಕೆ ತನ್ನ ಸಹಿಯನ್ನು ಮುಂಡರಗಿ ಪೋಲೀಸರು ಪಡೆದುಕೊಂಡಿರುತ್ತಾರೆ, ಸದರಿ ಸ್ಥಳವನ್ನು ಚಾಸಾ-9 ರವರು ತೋರಿಸಿರುತ್ತಾರೆ, ಅಲ್ಲಿ ಜಗಳವಾದ ಬಗ್ಗೆ ಪಂಚನಾಮೆಯನ್ನು ಮಾಡಿರುತ್ತಾರೆ, ನಿಪಿ-1 ನ್ನು ಮುಂಜಾನೆ 10.00 ರಿಂದ 11.00 ರ ವರೆಗೆ ಮಾಡಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **3 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸದರಿ ಸ್ಥಳದಲ್ಲಿ ಚಾಸಾ-9 ರವರು ಎರಡು ಕಲ್ಲುಗಳನ್ನು, ಒಂದು ಸೋಡಾ ಬಾಟಲಿ ಮತ್ತು ಸೋಡಾ ಬಾಟಲಿಯ ಚೂರನ್ನು ತೋರಿಸಿರುತ್ತಾರೆ, ಪೋಲೀಸರು ಅವುಗಳನ್ನು ಜಪ್ತ ಮಾಡಿಕೊಂಡಿರುತ್ತಾರೆ.ಆ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋದಲ್ಲಿ ತನ್ನ ಭಾವಚಿತ್ರ ಇರುತ್ತದೆ, ಸದರಿ ಫೋಟೋವನ್ನು ನಿಪಿ-2 ಎಂದು, ಸದರಿ ಎರಡು ಕಲ್ಲುಗಳನ್ನು ಒಟ್ಟಾಗಿ ಮು.ಮಾ.1 ಎಂದು, ಸೋಡಾ ಬಾಟಲಿಯನ್ನು ಮು.ಮಾ.2 ಎಂದು, ಸೋಡಾ ಬಾಟಲಿಯ ಚೂರುಗಳನ್ನು ಮು.ಮಾ.3 ಎಂದು ಮತ್ತು ಮು.ಮಾ.1 ರಿಂದ 3 ರ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ತನ್ನ ಸಹಿಗಳನ್ನು ಮು.ಮಾ.1(ಎ), ಮು.ಮಾ.2(ಎ), ಮತ್ತು ಮು.ಮಾ.3(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **4 –** ಫ್ರಾಸಾ-**2** ಮಲ್ಲನಗೌಡ ಪಾಟೀಲ ಇವರು ತಮ್ಮ ಸಾಕ್ಷಿಯಲ್ಲಿ, ಚಾಸಾ-6 ಮತ್ತು 8 ರವರು ತನ್ನ ಅಣ್ಣಂದಿರು ಇರುತ್ತಾರೆ, ಚಾಸಾ-5 ಮತ್ತು 7 ರವರು ತನ್ನ ತಮ್ಮಂದಿರು ಇರುತ್ತಾರೆ, ಚಾಸಾ-9 ರವರು ಚಾಸಾ-7 ರವರ ಹೆಂಡತಿ ಇರುತ್ತಾಳೆ, ಚಾಸಾ-10 ರವರು ತನ್ನ ಹೆಂಡತಿ ಇರುತ್ತಾಳೆ, ಚಾಸಾ-11 ಮತ್ತು 12 ರವರು ತನ್ನ ಅಣ್ಣಂದಿರ ಹೆಂಡತಿಯರು ಇರುತ್ತಾರೆ, ತನಗೆ ಚಾಸಾ-13 ರಿಂದ 17 ರವರು ಪರಿಚಯ ಇರುತ್ತಾರೆ, ಆರೋಪಿಗಳು ತನಗೆ ಪರಿಚಯ ಇರುತ್ತಾರೆ, ದಿಃ 05.03.2020 ರಂದು, ಚಾಸಾ-6, ಪರ್ವತಗೌಡ ಮತ್ತು ಲಲಿತವ್ವ ಇವರ ಮಧ್ಯ ಜಗಳ ಆಗಿತ್ತು, ಈ ವಿಚಾರಕ್ಕೆ ಸಂಬಂಧಿಸಿದಂತೆ ಚಾಸಾ-6 ರವರು ಒಟ್ಟು 6 ಜನರ ವಿರುದ್ಧ ಅಂದರೆ ಪರ್ವತಗೌಡ, ಲಲಿತವ್ವ, 1, 6, 7, 9 ನೇ

ಆರೋಪಿತರ ವಿರುದ್ಧ ದೂರನ್ನು ಕೊಟ್ಟು ಬಂದಿದ್ದರು, ದಿಃ 05.03.2020 ಕ್ಕಿಂತ ಮೊದಲು ತಮಗೂ ಮತ್ತು ಆರೋಪಿಗಳಿಗೂ ಹೊಲ ಮನೆ ಆಸ್ತಿ ಸಲುವಾಗಿ ಜಗಳ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **5 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 06.03.2020 ರಂದು, ಮಧ್ಯಾಹ್ನ 02.00 ಗಂಟೆ ಸುಮಾರಿಗೆ ಚಾಸಾ-8 ರವರ ಮನೆಯ ಮುಂದೆ ತಾನು, ಚಾಸಾ-6, 7 ಮತ್ತು ಚಾಸಾ-8 ರವರು ಸೇರಿ ಮಾತನಾಡುತ್ತಾ ನಿಂತುಕೊಂಡಿದ್ದಾಗ, ಎಲ್ಲಾ ಆರೋಪಿಗಳು ಅಲ್ಲಿಗೆ ಬಂದು, ತಮ್ಮ ಮೇಲೆ ಪೋಲೀಸರಿಗೆ ದೂರನ್ನು ಕೊಟ್ಟಿದ್ದೀಯಾ ಎಂದು ಜಗಳ ಮಾಡಲು ಶುರು ಮಾಡಿ, ತಾವು ನಾಲ್ಕು ಜನರಿಗೆ ಸೂಳೆ ಮಗನೆ, ಭೋಸುಡಿ ಮಗನೆ ಎಂದು ಬೈದಾಡಿದರು ಮತ್ತು ತಮಗೆ ಹೊಡೆ ಬಡೆ ಮಾಡಿರುತ್ತಾರೆ ಹಾಗೂ 1 ನೇ ಆರೋಪಿಯು ತನಗೆ ಮಚ್ಚಿನಿಂದ ತನ್ನ ತಲೆಗೆ ಹೊಡೆದಿರುತ್ತಾನೆ, ಆಗ ತನ್ನ ತಲೆ ಒಡೆದು ರಕ್ತ ಗಾಯವಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **6 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ 1 ನೇ ಆರೋಪಿಯು ಹಿರೋ ಹೊಂಡಾ ಸ್ಲೆಂಡರ ಬೈಕನ್ನು ತೆಗೆದುಕೊಂಡು ಬಂದು ಚಾಸಾ-6 ರವರ ಹೊಟ್ಟೆಯ ಮೇಲೆ ಹಾಯಿಸಿರುತ್ತಾನೆ, ಆಗ ಚಾಸಾ-6 ರವರು ನೆಲಕ್ಕೆ ಬಿದ್ದಿರುತ್ತಾರೆ, ನಂತರ 3 ನೇ ಆರೋಪಿಯು ಸೋಡಾ ಬಾಟಲಿಯಿಂದ ಚಾಸಾ-7 ರವರ ತಲೆಗೆ ಹೊಡೆದಿರುತ್ತಾನೆ, ಅದರಿಂದ ಚಾಸಾ-7 ರವರಿಗೆ ತಲೆಗೆ ರಕ್ತ ಗಾಯವಾಗಿರುತ್ತದೆ, ನಂತರ 3 ನೇ ಆರೋಪಿಯು ಬಡಿಗೆಯಿಂದ ನಮ್ಮೆಲ್ಲ ನಾಲ್ಕು ಜನರಿಗೆ ಹೊಡೆದಿರುತ್ತಾನೆ, ನಂತರ 4 ನೇ ಆರೋಪಿಯು ಕೂಡಾ ಬಡಿಗೆಯಿಂದ ನಮ್ಮೆಲ್ಲ ನಾಲ್ಕು ಜನರಿಗೆ ಹೊಡೆದಿರುತ್ತಾನೆ, 13 ನೇ ಆರೋಪಿಯು ಕಲ್ಲಿನಿಂದ ಚಾಸಾ-6 ರವರಿಗೆ ಹೊಡೆದಿರುತ್ತಾಳೆ, 7 ನೇ ಆರೋಪಿಯು ಕಲ್ಲಿನಿಂದ ಚಾಸಾ-7 ರವರಿಗೆ ಹೊಡೆದಿರುತ್ತಾನೆ, 11 ನೇ ಆರೋಪಿಯು ತನಗೆ ಕೈಯಿಂದ ಹೊಡೆದಿರುತ್ತಾನೆ, 6 ನೇ ಆರೋಪಿಯು ತನಗೆ ಕೈಯಿಂದ ಹೊಡೆದಿರುತ್ತಾನೆ, ಹಾಗೆಯೇ ಉಳಿದ ಎಲ್ಲಾ ಆರೋಪಿಗಳು ನಮ್ಮೆಲ್ಲ ನಾಲ್ಕು ಜನರಿಗೆ ಕೈಗಳಿಂದ ಹೊಡೆದಿರುತ್ತಾರೆ, ಆ ಸಮಯದಲ್ಲಿ, ಚಾಸಾ-13, 15, 10, 11, 9, 12 ರವರು ಬಂದು ತಮಗೆ ಆರೋಪಿಗಳು ಹೊಡೆ ಬಡೆ ಮಾಡುವುದನ್ನು ಬಿಡಿಸಿರುತ್ತಾರೆ, ಅವರು ಬಿಡಿಸಿಕೊಂಡಿದ್ದಕ್ಕೆ ಆರೋಪಿಗಳು ತಮಗೆ ನೀವು ಈಗ ಉಳಿದುಕೊಂಡಿರುತ್ತೀರಿ ಇನ್ನೂ ಐತಿ ತಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **7 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ತಾನು, ಚಾಸಾ-6 ಮತ್ತು 7 ರವರು ಟ್ಯಾಕ್ಸಿಯಲ್ಲಿ ಗದಗನ ಜಿಲ್ಲಾ ಆಸ್ಪತ್ರೆಗೆ ಬಂದು ದಾಖಲಾಗಿರುತ್ತೇವೆ, ಪೋಲೀಸರು ಗದಗ ಜಿಲ್ಲಾ ಆಸ್ಪತ್ರೆಗೆ ಬಂದು ನನ್ನಿಂದ ದೂರನ್ನು ಪಡೆದಿರುತ್ತಾರೆ, ದೂರನ್ನು ಚಾಸಾ-8 ರವರು ತಾವು ಹೇಳಿದಂತೆ ಬರೆದಿರುತ್ತಾರೆ, ಸದರಿ ದೂರನ್ನು ನಿಪಿ-3 ಎಂದು, ತನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು, ಚಾಸಾ-8 ರವರು ಕೂಡಾ ನಿಪಿ-3 ಕ್ಕೆ ದಸ್ತೂರ ಸಹಿ ಮಾಡಿರುತ್ತಾರೆ, ಚಾಸಾ-8 ರವರ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು, ಮಾರನೇ ದಿನ ಮುಂಜಾನೆ 09.00 ಗಂಟೆಗೆ ತನ್ನ ಹಾಗೂ ಚಾಸಾ-7 ರವರ ಆರೋಗ್ಯ ಗಂಭೀರವಾಗಿರುತ್ತದೆ, ಆಗ ಗದಗ ಜಿಲ್ಲಾ ಆಸ್ಪತ್ರೆಯ ವೈದ್ಯರು ಪರಿಸ್ಥಿತಿ ಗಂಭೀರ ಇರುವುದರಿಂದ ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಗೆ ಹೋಗಲು ಹೇಳಿರುತ್ತಾರೆ, ನಂತರ ತಾನು ಹಾಗೂ ಚಾಸಾ-7 ರವರು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ, ತಾನು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಒಂದು ತಿಂಗಳ ಕಾಲ ಇದ್ದೆನು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **8 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಾನು ದೂರಿನಲ್ಲಿ ಬಹಳ ಜನರ ಮೇಲೆ

ದೂರನ್ನು ಕೊಟ್ಟಿದ್ದೆನು, ಅದರಲ್ಲಿ 12 ನೇ ಆರೋಪಿಯ ಬದಲಾಗಿ ಅವರ ತಮ್ಮನ ಹೆಸರನ್ನು ತಪ್ಪಾಗಿ ಬರೆಸಿದ್ದೆನು, ಈ ಬಗ್ಗೆ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ತನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚನ್ನು ಮು.ಮಾ.4 ಎಂದು, ತಮಗೆ ಹೊಡೆಯಲು ಉಪಯೋಗಿಸಿದ ಎರಡು ಕಲ್ಲುಗಳನ್ನು ಒಟ್ಟಾಗಿ ಮು.ಮಾ.1 ಎಂದು, ತಮಗೆ ಹೊಡೆಯಲು ಸೋಡಾ ಬಾಟಲಿಯನ್ನು ಮು.ಮಾ.2 ಎಂದು ತಮಗೆ ಹೊಡೆಯಲು ಉಪಯೋಗಿಸಿದ ಬಡಿಗೆಯನ್ನು ಮು.ಮಾ.5 ಎಂದು, ಒಂದನೆ ಆರೋಪಿಯು ಚಾಸಾ-6 ರವರ ಹೊಟ್ಟೆಯ ಮೇಲೆ ಹಾಯಿಸಿದ ಹಿರೋ ಹೊಂಡಾ ಸ್ಲೆಂಡರ ಬೈಕನ ಎರಡು ಫೋಟೋಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು ಎಂದು ಮತ್ತು ನಿಪಿ-2 ರಲ್ಲಿ ಕಾಣಿಸುವ ಜಾಗವು ಆರೋಪಿಗಳು ಹೊಡೆ ಬಡೆ ಮಾಡಿದ ಜಾಗವಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು **thi**

ಪ್ರಶ್ನೆ **9 –** ಫ್ರಾಸಾ**-3** ವೀರೇಶ ಸಾಲಿಮಠ ಇವರು ತಮ್ಮ ಸಾಕ್ಷಿಯಲ್ಲಿ, ಆರೋಪಿತರು ತೋರಿಸಿ ಹಾಜರುಪಡಿಸಿದ ಗುನ್ನೆಗೆ ಬಳಸಿದ ಮೋಟರ ಸೈಕಲ ಮತ್ತು ಆಯುಧಗಳ ಜಪ್ತ ಪಂಚನಾಮೆಯ ಮೇಲೆ ತನ್ನ ಸಹಿಗಳು ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-6 ಎಂದು, ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-6(ಎ) ಎಂದು ಗುರುತಿಸಲಾಯಿತು, ಸುಮಾರು ಎರಡೂವರೆ ವರ್ಷಗಳ ಹಿಂದೆ, ಪೋಲೀಸರು ತನ್ನ ಮತ್ತು ಇತರರ ಸಹಿಗಳನ್ನು ಅತ್ತಿಕಟ್ಟಿಯ ಹೊಲದಲ್ಲಿ ಮಾಡಿಸಿಕೊಂಡಿರುತ್ತಾರೆ, ಆಗ ಪೋಲೀಸರು ಬಡಿಗೆ, ಕೊಡ್ಲಿ ಇವುಗಳನ್ನು ಅಮಾನತ್ತುಪಡಿಸಿಕೂಂಡಿರುತ್ತಾರೆ, ಸದರಿ ಬಡಿಗೆಯನ್ನು ಮು.ಮಾ.5 ಎಂದು ಗುರುತಿಸಲಾಗಿರುತ್ತದೆ, ಆಗ ಪೋಲೀಸರು ಫೋಟೋಗಳನ್ನು ತೆಗೆದಿರುತ್ತಾರೆ, ಸದರಿ ಫೋಟೋಗಳನ್ನು ನಿಪಿ-7 ರಿಂದ 10 ಎಂದು ಗುರುತಿಸಲಾಯಿತು ಮತ್ತು ನಿಪಿ-7 ರಿಂದ 10 ರಲ್ಲಿ, 1 ಮತ್ತು 3 ನೇ ಆರೋಪಿಗಳ, ತನ್ನ ಭಾವಚಿತ್ರಗಳು ಇರುತ್ತವೆ, ಸದರಿ 1 ಮತ್ತು 3 ನೇ ಆರೋಪಿಗಳು ಈ ದಿನ ತೆರೆದ ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **10 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಪೋಲೀಸರು ತನ್ನನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ, ಅಲ್ಲಿಯೂ ಸಹ ತನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ, ಠಾಣೆಯಲ್ಲಿ ನಿಪಿ-4 ಮತ್ತು 5 ರಂತೆ ಎರಡು ಫೋಟೋಗಳನ್ನು ತೆಗೆದಿರುತ್ತಾರೆ, ನಿಪಿ-4 ಮತ್ತು 5 ರಲ್ಲಿ ನ್ಯಾಯಾಲಯದ ಮುಂದೆ ಹಾಜರ ಇರುವ 1 ನೇ ಆರೋಪಿಯ ಭಾವಚಿತ್ರ ಇರುತ್ತದೆ, ನಿಪಿ-4 ಮತ್ತು 5 ನ್ನು ತೆಗೆಯುವಾಗ ತಮ್ಮ ಮುಂದೆ ಬೈಕು ಇತ್ತು ಮತ್ತು ಅದು ಅವುಗಳಲ್ಲಿ ಕಂಡುಬರುತ್ತದೆ, ಬೈಕನ್ನು ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ, ನಿಪಿ-6 ಪಂಚನಾಮೆಯನ್ನು ಮುಂಜಾನೆ 11.00 ರಿಂದ ಮದ್ಯಾಹ್ನ 03.00 ಗಂಟೆಯವರೆಗೆ ಮಾಡಲಾಗಿರುತ್ತದೆ, ತನ್ನ ಜೊತೆ ಇನ್ನೊಬ್ಬ ವ್ಯಕ್ತಿ ಕೂಡಾ ನಿಪಿ-6 ಕ್ಕೆ ಸಹಿ ಮಾಡಿರುತ್ತಾರೆ, ಆತ ಬೂದಿಹಾಳ ಗ್ರಾಮದ ವ್ಯಕ್ತಿಯಾಗಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **11 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿನಾಂಕಃ 08.03.2020 ರಂದು ತನ್ನನ್ನು ಹಾಗೂ ಚಾಸಾ-4 ರವರನ್ನು ಪೋಲೀಸರು ಮುಂಡರಗಿ ಠಾಣೆಗೆ ಕರೆಸಿದ್ದರು, ಠಾಣೆಯಲ್ಲಿ 1 ಮತ್ತು 3 ನೇ ಆರೋಪಿಗಳು ಇದ್ದರು, ಆಗ ಪೋಲೀಸರು 1 ಮತ್ತು 3 ನೇ ಆರೋಪಿಗಳು ಎಲ್ಲಿಗೆ ಕರೆದುಕೊಂಡು ಹೋಗಿ ಏಎನ್ನು ಹಾಜರಪಡಿಸುತ್ತಾರೋ ಅದನ್ನು ನೋಡಿ ಪಂಚನಾಮೆಯನ್ನು ಬರೆಸಿಕೊಡಬೇಕೆಂದು ಹೇಳಿದ್ದು ಅದಕ್ಕೆ ಒಪ್ಪಿಕೊಂಡೆವು, ಮೊದಲು ಅತ್ತಿಕಟ್ಟಿ ಗ್ರಾಮಕ್ಕೆ ಕರೆದುಕೂಂಡು ಹೋಗಿ ಆ ನಂತರ ಅಲ್ಲಿಂದ ಬಂದು ಪೋಲೀಸರು ಮೋಟರ ಸೈಕಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ, ಸದರಿ ಮೋಟರ ಸೈಕಲ ಹತ್ತಿರ 1 ನೇ ಆರೋಪಿಯನ್ನು ನಿಲ್ಲಿಸಿ ನಿಪಿ-4 ಮತ್ತು 5 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **12 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅತ್ತಿಕಟ್ಟಿ ಗ್ರಾಮಕ್ಕೆ ತಾನು, ಚಾಸಾ-4, 1 ಮತ್ತು 3 ನೇ ಆರೋಪಿಗಳು ಮತ್ತು ಪೋಲೀಸರು ಸೇರಿ ಜೀಪಿನಲ್ಲಿ ಹೋಗಿರುತ್ತೇವೆ, ಅತ್ತಿಕಟ್ಟಿ ಗ್ರಾಮದಿಂದ ಕಬಲಾಯತಕಟ್ಟಿ ತಾಂಡಾಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಬದುವಿನ ಕಲ್ಲಿನ ಕುಟ್ರಿಯಲ್ಲಿ ಇದ್ದ ಮು.ಮಾ.4 ಒಂದು ಮಚ್ಚನ್ನು 1 ನೇ ಆರೋಪಿಯು ತೆಗೆದು ಹಾಜರಪಡಿಸಿರುತ್ತಾರೆ ಮತ್ತು 3 ನೇ ಆರೋಪಿಯು ಮು.ಮಾ.5 ಬಡಿಗೆಯನ್ನು ಹಾಜರುಪಡಿಸಿರುತ್ತಾರೆ, ನಿಪಿ-6 ನ್ನು ಮುಂಜಾನೆ 10.00 ರಿಂದ 12.00 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **13 –** ಫ್ರಾಸಾ-**4** ಗಂಗನಗೌಡ ಪಾಟೀಲ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-2 ಮತ್ತು ಚಾಸಾ-7, 8 ರವರು ತನ್ನ ಖಾಸ ತಮ್ಮಂದಿರುತ್ತಾರೆ, ಚಾಸಾ-9 ರವರು ಚಾಸಾ-7 ರವರ ಹೆಂಡತಿ ಇರುತ್ತಾಳೆ, ಚಾಸಾ-10 ರವರು ಫ್ರಾಸಾ-2 ರವರ ಹೆಂಡತಿ ಇರುತ್ತಾಳೆ, ಚಾಸಾ-11 ತನ್ನ ಹೆಂಡತಿ ಇರುತ್ತಾಳೆ, ಚಾಸಾ-12 ರವರು ಚಾಸಾ-8 ರವರ ಹೆಂಡತಿ ಇರುತ್ತಾಳೆ, ತನಗೆ ಚಾಸಾ-13 ರಿಂದ 16 ರವರ ಪರಿಚಯ ಇರುತ್ತದೆ, ಆರೋಪಿಗಳು ತಮ್ಮ ಸಂಬಂಧಿಕರು ಇರುತ್ತಾರೆ, 1 ನೇ ಆರೋಪಿಯ ತಂದೆಯಾದ ಪರ್ವತಗೌಡ ತನಗೆ ಚಿಕ್ಕಪ್ಪನಾಗಬೇಕು, ತಮಗೂ ಮತ್ತು ಸದರಿ ಪರ್ವತಗೌಡನಿಗೂ ಆಸ್ತಿಗೆ ಸಂಬಂಧಿಸಿದಂತೆ ಜಗಳ ಇತ್ತು, ಈಗ ಸುಮಾರು ಮೂರು ವರ್ಷಗಳ ಹಿಂದೆ, ಒಂದು ದಿನ ಆರೋಪಿಗಳ ತಾಡಪತ್ರಿಯನ್ನು ತಮ್ಮ ರಾಶಿಯ ಮೇಲೆ ಹೊದಿಸಿದ್ದೆವು, ಆ ಕಾರಣಕ್ಕೆ ತಮಗೂ ಹಾಗೂ ಆರೋಪಿಗಳಿಗೂ ಜಗಳ ಆಗಿರುತ್ತದೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸದರಿ ಪರ್ವತಗೌಡ, 1 ಮತ್ತು 3 ನೇ ಆರೋಪಿಗಳು ಹಾಗೂ ಇನ್ನಿತರರ ವಿರುದ್ಧ ಪೋಲೀಸರಿಗೆ ದೂರನ್ನು ಕೊಟ್ಟಿದ್ದೆವು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **14 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಸದರಿ ದೂರನ್ನು ಕೊಟ್ಟ ಮಾರನೇ ದಿನ, ತಾನು, ಫ್ರಾಸಾ-2, ಚಾಸಾ-7 ಮತ್ತು 8 ರವರು ಸೇರಿ ಚಾಸಾ-8 ರವರ ಮನೆಯ ಮುಂದೆ ನಿಂತುಕೊಂಡಿದ್ದಾಗ, ಮದ್ಯಾಹ್ನ 02.00 ಗಂಟೆ ಸುಮಾರಿಗೆ ಅಲ್ಲಿಗೆ ಎಲ್ಲಾ ಆರೋಪಿಗಳು ಕೈಗಳಲ್ಲಿ ಮಚ್ಚು, ಸೋಡಾ ಬಾಟಲಿ, ಬಡಿಗೆ, ಕಲ್ಲುಗಳನ್ನು ಹಿಡಿದುಕೊಂಡು ಬಂದು, ತಮಗೆ ಫ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ ಮತ್ತು ಅವರು ತಮಗೆ ಹಡಸಿ ಮಕ್ಕಳೆ, ಬೋಸಡಿ ಮಕ್ಕಳೆ ಎಂದು ಬೈದಿರುತ್ತಾರೆ ಹಾಗೂ ತಮಗೆ ಹೊಡೆಯುವುದು, ಬಡಿಯುವುದು ಮಾಡಿರುತ್ತಾರೆ, ಫ್ರಾಸಾ-2 ರವರಿಗೆ, 1 ನೇ ಆರೋಪಿಯು ಮಚ್ಚಿನಿಂದ ಅವರ ತಲೆಗೆ ಹೊಡೆದಿರುತ್ತಾನೆ, ಮೂರನೆ ಅರೋಪಿಯು ಸೋಡಾ ಬಾಟಲಿಯಿಂದ ಚಾಸಾ-7 ರವರ ತಲೆಗೆ ಹೊಡೆದಿರುತ್ತಾನೆ, 4 ನೇ ಆರೋಪಿಯು ಬಡಿಗೆಯಿಂದ ತನಗೆ, ಫ್ರಾಸಾ-2, ಚಾಸಾ-7 ಮತ್ತು 8 ರವರಿಗೆ ಹೊಡೆದಿರುತ್ತಾನೆ, 7 ನೇ ಆರೊಪಿಯು ಕಲ್ಲಿನಿಂದ ತನಗೆ ಹೊಡೆದಿರುತ್ತಾನೆ, 1 ನೇ ಆರೋಪಿಯು ಬೈಕನ್ನು ತನ್ನ ಮೈಮೇಲೆ ಹಾಯಿಸಿಕೊಂಡು ಹೋಗಿರುತ್ತಾನೆ, ಜಗಳವನ್ನು ಚಾಸಾ-13 ರಿಂದ 16 ರವರು ಬಿಡಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **15 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಫ್ರಾಸಾ-2 ಮತ್ತು ಚಾಸಾ-7 ರವರಿಗೆ ಹೊಡೆದಿದ್ದರಿಂದಾಗಿ ಅವರ ತಲೆಗೆ ರಕ್ತಗಾಯಗಳಾಗಿದ್ದವು, ನಂತರ ತಾವು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದು, ಮಾರನೇ ದಿನ ಫ್ರಾಸಾ-2 ಮತ್ತು ಚಾಸಾ-7 ರವರು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಹೋಗಿರುತ್ತಾರೆ, ಘಟನೆ ಬಗ್ಗೆ ಫ್ರಾಸಾ-2 ರವರು ದೂರನ್ನು ಕೊಟ್ಟಿರುತ್ತಾರೆ, ಪೋಲೀಸರು ಘಟನೆ ಬಗ್ಗೆ ತನ್ನನ್ನು ವಿಚಾರಿಸಿರುತ್ತಾರೆ, ಫ್ರಾಸಾ-2 ರವರಿಗೆ ಹೊಡೆಯಲು ಉಪಯೋಗಿಸಿದ ಮಚ್ಚನ್ನು ಮು.ಮಾ.4 ಎಂದು, ಬಡಿಗೆಯನ್ನು ಮು.ಮಾ.5 ಎಂದು, ಸೋಡಾ ಬಾಟಲಿಯನ್ನು ಮು.ಮಾ.2 ಎಂದು ಮತ್ತು ಸೋಡಾ ಬಾಟಲಿಯ ಚೂರುಗಳನ್ನು ಮು.ಮಾ.3 ಎಂದು ಹಾಗೂ ಹೊಡೆಯಲು ಉಪಯೋಗಿಸಿದ

ಕಲ್ಲುಗಳನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **16 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** 1 ನೇ ಆರೋಪಿಯು ತನ್ನ ಮೈಮೇಲೆ ಹಾಯಿಸಿಕೊಂಡು ಹೋದ ಬೈಕು ನಿಪಿ-4 ಮತ್ತು 5 ಫೋಟೋದಲ್ಲಿ ಕಂಡುಬರುತ್ತದೆ, ಮೂರನೆ ಆರೋಪಿಯು ಮು.ಮಾ.5 ರಿಂದ ತನಗೆ, ಚಾಸಾ-7 ರವರಿಗೆ ಮತ್ತು ಫ್ರಾಸಾ-2 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ, 7 ನೇ ಅರೋಪಿಯು ಮು.ಮಾ.1 ರಿಂದ ಚಾಸಾ-7 ರವರಿಗೆ ಹೊಡೆದಿರುತ್ತಾನೆ, 13 ನೇ ಆರೋಪಿಯು ಮು.ಮಾ.1 ರಿಂದ ತನಗೆ ಹೊಡೆದಿರುತ್ತಾಳೆ, ಆಗ ಚಾಸಾ-9 ರಿಂದ 16 ರವರು ಜಗಳವನ್ನು ಬಿಡಿಸಿರುತ್ತಾರೆ, ಎಲ್ಲಾ 13 ಜನ ಆರೋಪಿಗಳು ತಮಗೆ ತೆಕ್ಕೆ ಬಿದ್ದು ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **17 –** ಫ್ರಾಸಾ**-5** ಈರಪ್ಪ ಚವಡಿ ಇವರು ತಮ್ಮ ಸಾಕ್ಷಿಯಲ್ಲಿ, ಗುನ್ನಾ ಜಾಗೆ ಪಂಚನಾಮೆಯ ಮೇಲೆ ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-1 ಎಂದು ಮತ್ತು ತನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು, ದಿಃ ದಿಃ 07.03.2020 ರಂದು ಪೋಲೀಸರು ಮುಂಜಾನೆ 10.00 ರಿಂದ 11.00 ಗಂಟೆಯ ವರೆಗೆ ಚಾಸಾ-8 ರವರ ಮನೆಯ ಮುಂದೆ ನಿಪಿ-1 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ, ಸ್ಥಳವನ್ನು ಚಾಸಾ-9 ರವರು ತೋರಿಸಿರುತ್ತಾರೆ, ಆಗ ಪೋಲೀಸರು ಮು.ಮಾ, 1 ರಿಂದ 5 ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ, ಆಗ ನಿಪಿ-2 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ನಿಪಿ-2 ರಲ್ಲಿ ತನ್ನ ಭಾವಚಿತ್ರ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು ಸುಳ್ಳು

ಪ್ರಶ್ನೆ **18 –** ಫ್ರಾಸಾ**-6** ರುದ್ರಗೌಡ ಪಾಟೀಲ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-2, 4 ಮತ್ತು ಚಾಸಾ-8 ರವರು ತನಗೆ ಅಣ್ಣಂದಿರಾಗಬೇಕು, ಚಾಸಾ-9 ತನ್ನ ಹೆಂಡತಿ ಇರುತ್ತಾಳೆ, ಚಾಸಾ-10, 11 ಮತ್ತು 12 ರವರು ತನ್ನ ಅತ್ತಿಗೆಯರು ಇರುತ್ತಾರೆ, ತನಗೆ ಚಾಸಾ-13 ರಿಂದ 16 ರವರು ಪರಿಚಯ ಇರುತ್ತಾರೆ, ಎಲ್ಲಾ ಆರೋಪಿಗಳು ತನಗೆ ಪರಿಚಯ ಇರುತ್ತಾರೆ, ಅವರು ತಮ್ಮ ಊರಿನವರು ಇರುತ್ತಾರೆ, ಸುಮಾರು 3 ವರ್ಷಷಗಳ ಹಿಂದೆ, ಫ್ರಾಸಾ-4 ರವರ ಜೊತೆ 1 ನೇ ಆರೋಪಿ ತಂದೆಯಾದ ಪರ್ವತಗೌಡ ಪಾಟೀಲ ರವರದು ಆಸ್ತಿಗೆ ಸಂಬಂಧಿಸಿದಂತೆ ಜಗಳವಾಗಿತ್ತು, ಆ ಜಗಳದಲ್ಲಿ ತಾಡಪತ್ರಿಯ ಸಲುವಾಗಿ ಜಗಳವಾಗಿತ್ತು, ಈ ಕಾರಣಕ್ಕಾಗಿ ಫ್ರಾಸಾ-4 ರವರು ಪೋಲೀಸರಿಗೆ ದೂರನ್ನು ಕೊಟ್ಟಿದ್ದರು ಹಾಗೂ ಆಗಾಗ ತಮಗೂ ಮತ್ತು ಆರೋಪಿಗಳ ಮಧ್ಯ ಜಗಳವಾಗುತ್ತಿತ್ತು, ಈ ರೀತಿ ಫ್ರಾಸಾ-4 ರವರು ದೂರನ್ನು ಕೊಟ್ಟಿದ್ದರಿಂದ ಆರೋಪಿಗಳಿಗೆ ಫ್ರಾಸಾ-4 ರವರ ಮೇಲೆ ಸಿಟ್ಟು ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **19 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಇದಾದ 3 ದಿನಗಳ ನಂತರ, ಒಂದು ದಿನ ಮದ್ಯಾಹ್ನ 02.00 ಗಂಟೆ ಸುಮಾರಿಗೆ ಚಾಸಾ-8 ರವರ ಮನೆಯ ಹತ್ತಿರ ತಾನು, ಫ್ರಾಸಾ-2, 4 ಮತ್ತು ಚಾಸಾ-8 ರವರು ನಿಂತುಕೊಂಡಿದ್ದಾಗ, ಆರೋಪಿಗಳೆಲ್ಲರೂ ಅಲ್ಲಿಗೆ ಬಂದು, ಪದೇ ಪದೇ ಕೇಸು ಕೊಡುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ತಮಗೆ ಬೈದಾಡಿದರು ಮತ್ತು ಅವರು ಕೈಗಳಲ್ಲಿ ಮಚ್ಚು, ಬಡಿಗೆ, ಕಲ್ಲು ಹಿಡಿದುಕೊಂಡು ಬಂದಿದ್ದರು, ಒಂದನೆ ಅರೋಪಿತನು ಮಚ್ಚಿನಿಂದ ಫ್ರಾಸಾ-2 ರವರ ತಲೆಗೆ ಹೊಡೆದಿರುತ್ತಾನೆ, ಒಂದನೆ ಆರೋಪಿತನು ತನ್ನ ಬೈಕನ್ನು ಚಲಾಯಿಸಿಕೊಂಡು ಬಂದು, ಫ್ರಾಸಾ-4 ರವರ ಹೊಟ್ಟೆಯ ಮೇಲೆ ಹಾಯಿಸಿಕೊಂಡು ಹೋಗಿರುತ್ತಾನೆ, 3 ನೇ ಆರೋಪಿಯು ಪೆಪ್ಸಿ ಬಾಟಲಿಯಿಂದ ತನ್ನ ತಲೆಗೆ ಹೊಡೆದಿರುತ್ತಾನೆ, 7 ನೇ ಆರೋಪಿಯು ಕಲ್ಲಿನಿಂದ ತನ್ನ ತಲೆಗೆ ಹೊಡೆದಿರುತ್ತಾನೆ, ಫ್ರಾಸಾ-4 ರವರಿಗೂ ಕೂಡಾ ಆರೋಪಿಗಳು ಕಲ್ಲಿನಿಂದ ಹೊಡೆದಿರುತ್ತಾರೆ, 4 ನೇ

ಆರೋಪಿಯು ಕೋಲಿನಿಂದ ತನಗೆ, ಫ್ರಾಸಾ-2, 4 ರವರಿಗೆ ಹೊಡೆದಿರುತ್ತಾನೆ, ಉಳಿದ ಆರೋಪಿಗಳು ಸಹ ಬಡಿಗೆಯಿಂದ ತನಗೆ, ಫ್ರಾಸಾ-2, 4 ರವರಿಗೆ ಹೊಡೆದಿರುತ್ತಾರೆ, ಆಗ ಚಾಸಾ-13, 15 ಮತ್ತು 16 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ, ಆಗ ತಮ್ಮ ಅತ್ತಿಗೆಯರು ಸಹ ಜಗಳವನ್ನು ಬಿಡಿಸಿರುತ್ತಾರೆ, ಆಗ ಆರೋಪಿಗಳು ತಮಗೆ ಜೀವದ ಬೆದರಿಕೆಯನ್ನು ಹಾಕಿರುತ್ತಾರೆ, ನಂತರ ತಮ್ಮನ್ನು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಲಾಗಿರುತ್ತದೆ, ನಂತರ ಅಲ್ಲಿಂದ ತಾನು ಮತ್ತು ಫ್ರಾಸಾ-2 ರವರು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ, ಈ ಬಗ್ಗೆ ಫ್ರಾಸಾ-2 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ಪೋಲೀಸರು ತನ್ನ ಹೇಳಿಕೆಯನ್ನು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **20 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಮಗೆ ಹೊಡೆಯಲು ಉಪಯೋಗಿಸಿದ ಕಲ್ಲು, ಸೋಡಾ ಬಾಟಲಿ, ಸೋಡಾ ಬಾಟಲಿಯ ಚೂರುಗಳು, ಮಚ್ಚು ಮತ್ತು ಬಡಿಗೆ ಇವುಗಳನ್ನು ಮ.ಮಾ, 1 ರಿಂದ 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ, ಫ್ರಾಸಾ-4 ರವರ ಮೇಲೆ ಹಾಯಿಸಿಕೊಂಡು ಹೋದ ಬೈಕು ನಿಪಿ-4 ಮತ್ತು 5 ಫೋಟೋಗಳಲ್ಲಿ ಕಂಡುಬರುತ್ತದೆ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **21 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 05.03.2020 ರಂದು, ತಾಡಪತ್ರಿಯ ಸಲುವಾಗಿ ಪರ್ವತಗೌಡ ಪಾಟೀಲ ಮತ್ತು ಅವರ ಮನೆಯ ಜನರಿಗೂ ಮತ್ತು ಫ್ರಾಸಾ-4 ರವರಿಗೂ ಜಗಳವಾಗಿತ್ತು ಮತ್ತು ಈ ವಿಚಾರಕ್ಕೆ ಸಂಬಂಧಿಸಿದಂತೆ ಫ್ರಾಸಾ-4 ರವರು ಪೋಲೀಸರಿಗೆ ದೂರನ್ನು ನೀಡಿದ್ದರು, ಜಮೀನು ಹಂಚಿಕೆ ಸಲುವಾಗಿ ತಮಗೂ ಮತ್ತು ಆರೋಪಿಗಳಿಗೂ ತಂಟೆ ತಕರಾರು ಇತ್ತು, ಅದೇ ಸಿಟ್ಟಿನಿಂದ, ದಿಃ 06.03.2020 ರಂದು ಚಾಸಾ-8 ರವರ ಮನೆಯ ಹತ್ತಿರ ತಾನು, ಫ್ರಾಸಾ-2, 4 ಮತ್ತು ಚಾಸಾ-8 ರವರು ನಿಂತುಕೊಂಡಿದ್ದಾಗ, ಆರೋಪಿಗಳೆಲ್ಲರೂ ಕೈಗಳಲ್ಲಿ ಕಲ್ಲು, ಸೋಡಾ ಬಾಟಲಿ, ಸೋಡಾ ಬಾಟಲಿಯ ಚೂರುಗಳು, ಮಚ್ಚು ಮತ್ತು ಬಡಿಗೆಗಳನ್ನು ಹಿಡಿದುಕೊಂಡು ಬಂದು, ತಮ್ಮ ಮೇಲೆ ಕೇಸು ಮಾಡಿದ್ದೀರಾ ಸೂಳೆ ಮಕ್ಕಳೆ ಎಂದು ಬೈದಾಡಿರುತ್ತಾರೆ, ಎಲ್ಲಾ ಆರೋಪಿಗಳು ತಮ್ಮೆಲ್ಲರಿಗೂ ತೆಕ್ಕೆ ಬಿದ್ದು ಕೈಗಳಿಂದ ಹೊಡೆ ಬಡೆ ಮಾಡಿರುತ್ತಾರೆ, ಮೂರನೆ ಆರೋಪಿಯು 4 ನೇ ಆರೋಪಿಯ ಕೈಯಲ್ಲಿದ್ದ ಬಡಿಗೆಯನ್ನು ತೆಗೆದುಕೊಂಡು ತನಗೆ, ಫ್ರಾಸಾ-2 ಮತ್ತು 4 ರವರಿಗೆ ಹೊಡೆದಿರುತ್ತಾನೆ, 13 ನೇ ಆರೋಪಿಯು ಕಲ್ಲಿನಿಂದ ಫ್ರಾಸಾ-4 ರವರಿಗೆ ಹೊಡೆದಿರುತ್ತಾಳೆ, ಆರೋಪಿಗಳೆಲ್ಲರೂ ತಾವು ನಾಲ್ಕೂ ಜನರನ್ನು ಕೊಲೆ ಮಾಡುವ ಉದ್ದೇಶದಿಂದ, ಈ ರೀತಿ ಹೊಡೆ ಬಡೆ ಮಾಡಿ ಗಾಯಪಡಿಸಿರುತ್ತಾರೆ, ಈ ರೀತಿ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **22 –** ಫ್ರಾಸಾ**-7** ಹನಮಂತಗೌಡ ಪಾಟೀಲ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-2 ಮತ್ತು 6 ರವರು ತನ್ನ ತಮ್ಮಂದಿರು ಇರುತ್ತಾರೆ, ಫ್ರಾಸಾ-4 ತನ್ನ ಅಣ್ಣನಿರುತ್ತಾನೆ, ಚಾಸಾ-9 ಮತ್ತು 10 ರವರು ತನ್ನ ತಮ್ಮಂದಿರ ಹೆಂಡತಿಯರು ಇರುತ್ತಾರೆ, ಚಾಸಾ-11 ಫ್ರಾಸಾ-4 ರವರ ಹೆಂಡತಿ ಇರುತ್ತಾಳೆ, ಚಾಸಾ-12 ತನ್ನ ಹೆಂಡತಿ ಇರುತ್ತಾಳೆ, ತನಗೆ ಚಾಸಾ-13 ರಿಂದ 16 ರವರು ಪರಿಚಯ ಇರುತ್ತಾರೆ, ಎಲ್ಲಾ ಆರೋಪಿಗಳು ತನಗೆ ಪರಿಚಯ ಇರುತ್ತಾರೆ, ಅವರು ತಮ್ಮ ಊರಿನವರು ಇರುತ್ತಾರೆ, ದಿಃ05.03.2020 ರಂದು, ಫ್ರಾಸಾ-4 ರವರಿಗೂ ಮತ್ತು ಪರ್ವತಗೌಡ ಪಾಟೀಲ ಈತನಿಗೂ ತಾಡಪತ್ರಿಯ ಸಲುವಾಗಿ ಜಗಳವಾಗಿತ್ತು, ಈ ಕುರಿತು ಫ್ರಾಸಾ-4 ರವರು ಪೋಲೀಸರಿಗೆ ದೂರನ್ನು ಕೊಟ್ಟಿದ್ದರು, ದೂರನ್ನು ಕೊಟ್ಟಿದ್ದರಿಂದ ಆರೋಪಿಗಳು ಸಿಟ್ಟಾಗಿ, ಮಾರನೇ ದಿನ ಅಂದರೆ ದಿಃ 06.03.2020 ರಂದು, ಮದ್ಯಾಹ್ನ 02.00 ಗಂಟೆಗೆ ತಾನು, ಫ್ರಾಸಾ-2, 4 ಮತ್ತು 6 ರವರು ತಮ್ಮ ಮನೆಯ ಮುಂದೆ ನಿಂತುಕೊಂಡಿದ್ದೆವು, ಆಗ ಆರೋಪಿಗಳೆಲ್ಲರೂ ಕೈಗಳಲ್ಲಿ ಮಚ್ಚು, ಬಡಿಗೆ, ಕಲ್ಲು ಮತ್ತು ಸೋಡಾ ಬಾಟಲಿ ಹಿಡಿದುಕೊಂಡು ಬಂದಿದ್ದರು, ಅವರಲ್ಲಿ 3 ನೇ ಆರೋಪಿ ಸೋಡಾ ಬಾಟಲಿ

ಹಿಡಿದುಕೊಂಡು ಬಂದಿದ್ದನು, 4, 6 ಮತ್ತು 7 ನೇ ಆರೋಪಿಗಳು ಬಡಿಗೆಯನ್ನು ಹಿಡಿದುಕೊಂಡು ಬಂದಿದ್ದರು, 8 ನೇ ಆರೋಪಿಯು ಕಬ್ಬಿಣದ ರಾಡನ್ನು ಹಿಡಿದುಕೊಂಡು ಬಂದಿದ್ದನು, 1 ನೇ ಆರೋಪಿಯು ಬೈಕ ಮೇಲೆ ಬಂದಿದ್ದನು, ಆರೋಪಿಗಳು ಬಂದವರೇ ಅವಾಚ್ಯ ಶಬ್ದಗಳಿಂದ ತಮಗೆ ಬೈದಾಡಿರುತ್ತಾರೆ, 1 ನೇ ಆರೋಪಿಯು ಮಚ್ಚಿನಿಂದ ಫ್ರಾಸಾ-2 ರವರ ತಲೆಗೆ ಹೊಡೆದಿದ್ದು, ಆಗ ಆತನಿಗೆ ರಕ್ತಗಾಯವಾಗಿರುತ್ತದೆ, 1 ನೇ ಆರೋಪಿಯು ತನ್ನ ಮೋಟರ ಸೈಕಲನ್ನು ಫ್ರಾಸಾ-4 ರವರ ಹೊಟ್ಟೆಯ ಮೇಲಿನಿಂದ ಹಾಯಿಸಿಕೊಂಡು ಹೋಗಿರುತ್ತಾನೆ, 3 ನೇ ಆರೋಪಿಯು ಒಡೆದ ಸೋಡಾ ಬಾಟಲಿಯಿಂದ ಫ್ರಾಸಾ-6 ರವರ ತಲೆಗೆ ಹೊಡೆದಿರುತ್ತಾನೆ, 4 ನೇ ಆರೋಪಿಯು ಫ್ರಾಸಾ-2, 4 ಮತ್ತು 6 ರವರಿಗೆ ಹೊಡೆದಿರುತ್ತಾನೆ, 3 ನೇ ಆರೋಪಿಯು, ಬಡಿಗೆಯಿಂದ ಫ್ರಾಸಾ-2, 4 ಮತ್ತು 6 ರವರಿಗೆ ಹೊಡೆದಿರುತ್ತಾನೆ, 10 ನೇ ಆರೋಪಿಯು ಕಲ್ಲಿನಿಂದ ಫ್ರಾಸಾ-4 ರವರಿಗೆ ಹೊಡೆದಿರುತ್ತಾಳೆ, 5 ನೇ ಆರೋಪಿಯು ಕಲ್ಲಿನಿಂದ ಫ್ರಾಸಾ-2 ಮತ್ತು 4 ರವರಿಗೆ ಹೊಡೆದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **23 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆಗ ತಾನು, ಚಾಸಾ-9 ರಿಂದ 12, 13, 14 ರವರು ಜಗಳವನ್ನು ಬಿಡಿಸಿರುತ್ತೇವೆ, ಆಗ ಆರೋಪಿಗಳು ಇನ್ನೊಂದು ಸಾರಿ ದೂರನ್ನು ನೀಡಿದರೆ ಸಾಯಿಸುವುದಾಗಿ ಜೀವದ ಬೆದರಿಕೆಯನ್ನು ಹಾಕಿರುತ್ತಾರೆ, ನಂತರ ಫ್ರಾಸಾ-2, 4 ಮತ್ತು 6 ರವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ, ನಂತರ ಫ್ರಾಸಾ-2 ಮತ್ತು 6 ರವರನ್ನು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿರುತ್ತದೆ, ಈ ಬಗ್ಗೆ ಫ್ರಾಸಾ-2 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ಪೋಲೀಸರು ತನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ, ತಾನು ನಡೆದ ವಿಚಾರವನ್ನು ಪೋಲೀಸರ ಮುಂದೆ ಹೇಳಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **24 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ತಮಗೆ ಹೊಡೆಯಲು ಉಪಯೋಗಿಸಿದ ಕಲ್ಲು, ಸೋಡಾ ಬಾಟಲಿ, ಸೋಡಾ ಬಾಟಲಿಯ ಚೂರುಗಳು, ಮಚ್ಚು ಮತ್ತು ಬಡಿಗೆ ಇವುಗಳನ್ನು ಮ.ಮಾ, 1 ರಿಂದ 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ, ಫ್ರಾಸಾ-4 ರವರ ಮೇಲೆ ಹಾಯಿಸಿಕೊಂಡು ಹೋದ ಬೈಕು ನಿಪಿ-4 ಮತ್ತು 5 ಫೋಟೋಗಳಲ್ಲಿ ಕಂಡುಬರುತ್ತದೆ ಎಂದು, ಆರೋಪಿಗಳೆಲ್ಲರೂ ಬಂದು ತಮ್ಮ ಮೇಲೆ ಕೇಸು ಮಾಡಿದ್ದೀರಾ ಸೂಳೆ ಮಕ್ಕಳೆ ಎಂದು ಬೈದಿರುತ್ತಾರೆ, ಎಲ್ಲಾ ಆರೋಪಿಗಳು ತಮ್ಮೆಲ್ಲರಿಗೂ ತೆಕ್ಕೆ ಬಿದ್ದು ಕೈಗಳಿಂದ ಹೊಡೆ ಬಡೆ ಮಾಡಿರುತ್ತಾರೆ, 7 ನೇ ಆರೋಪಿಯು ಫ್ರಾಸಾ-6 ರವರಿಗೆ ಕಲ್ಲಿನಿಂದ ಹೊಡೆ ಬಡೆ ಮಾಡಿರುತ್ತಾನೆ, ಈ ರೀತಿ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **25 –** ಫ್ರಾಸಾ-**8** ಬಸವರಾಜ ಕೋಟಿ ಇವರು ತಮ್ಮ ಸಾಕ್ಷಿಯಲ್ಲಿ, ತನಗೆ ಫ್ರಾಸಾ-2, 4, 6, 7, ಚಾಸಾ-9 ರಿಂದ 12 ಹಾಗೂ 14 ರಿಂದ 16 ರವರ ಪರಿಚಯ ಇರುತ್ತಾರೆ, ತನಗೆ ಆರೋಪಿಗಳ ಪರಿಚಯ ಇರುತ್ತದೆ, ಆರೋಪಿತರು ಹಾಗೂ ಫ್ರಾಸಾ-2, 4, 6, 7 ಇವರ ಮಧ್ಯ ಜಮೀನಿಗೆ ಸಂಬಂಧಪಟ್ಟಂತೆ ತಂಟೆ, ತಕರಾರು ಇತ್ತು, ಇದೇ ರೀತಿ ತಂಟೆ, ತಕರಾರು ಸುಮಾರು 5 - 6 ವರ್ಷಗಳಿಂದಲೂ ಇರುತ್ತದೆ, ಈಗ ಸುಮಾರು ಒಂದು ವರ್ಷದ ಹಿಂದೆ, ಒಂದು ದಿನ ತಾಡಪತ್ರಿ ಸಲುವಾಗಿ ಅವರ ಮಧ್ಯ ಜಗಳವಾಗಿತ್ತು, ಈ ಬಗ್ಗೆ ಫ್ರಾಸಾ-4 ರವರು ಪೋಲೀಸರಿಗೆ ದೂರನ್ನು ಕೊಟ್ಟಿದ್ದರು, ಈ ಕಾರಣಕ್ಕಾಗಿ ಆರೋಪಿಗಳು ಫ್ರಾಸಾ-4 ರವರ ಮೇಲೆ ಸಿಟ್ಟಾಗಿದ್ದರು, ಫ್ರಾಸಾ-4 ರವರು ದೂರನ್ನು ಕೊಟ್ಟ ಎರಡನೆ ದಿನಕ್ಕೆ ಘಟನೆ ನಡೆದಿರುತ್ತದೆ, ಫ್ರಾಸಾ-4, 6, 2 ರವರು ಫ್ರಾಸಾ-7 ರವರ ಮನೆ ಹತ್ತಿರ ನಿಂತುಕೊಂಡಿದ್ದರು, ತಾನು ಮತ್ತು ಫ್ರಾಸಾ-7 ರವರು ಫ್ರಾಸಾ-7 ರವರ ಮನೆಯಲ್ಲಿ ಇದ್ದೆವು, ಫ್ರಾಸಾ-7 ರವರು ಮಾತನಾಡುತ್ತಾ ತಮ್ಮ ಮನೆಯಲ್ಲಿ ಇದ್ದರು, ಆ ನಂತರ ತಾನು ಮತ್ತು ಫ್ರಾಸಾ-7 ರವರು ಕೂಡಾ ಹೊರಗೆ ಬಂದಿರುತ್ತೇವೆ, ಆ ಸಮಯದಲ್ಲಿ ತಮ್ಮ ಜೊತೆಗೆ

ಚಾಸಾ-14, 15 ರವರು ಇದ್ದರು, ಆಗ ಸಮಯ ಮದ್ಯಾಹ್ನ 01.30/02.00 ಗಂಟೆಯಾಗಿತ್ತು, ಆಗ 1 ನೇ ಆರೋಪಿ ಸೇರಿ 10 - 12 ಜನರು ಅಲ್ಲಿಗೆ ಬಂದಿರುತ್ತಾರೆ, ಅವರ ಕೈಗಳಲ್ಲಿ ಬಾಟಲಿ, ಕಲ್ಲು ಹಾಗೂ ಬಡಿಗೆ ಇದ್ದವು, ಆಗ 1 ನೇ ಆರೋಪಿ ಬಾಟಲಿಯಿಂದ ಫ್ರಾಸಾ-2 ರವರಿಗೆ ಹೊಡೆದಿರುತ್ತಾನೆ, ಇನ್ನೂ ಇಬ್ಬರು ಕೂಡಾ ಬಾಟಲಿ ಮತ್ತು ಕಲ್ಲಿನಿಂದ ಫ್ರಾಸಾ-2 ರವರಿಗೆ ಹೊಡೆದಿರುತ್ತಾರೆ, ಫ್ರಾಸಾ-4 ರವರು ಕೆಳಗೆ ಬಿದ್ದಾಗ, 1 ನೇ ಆರೋಪಿಯು ಬೈಕನ್ನು ಫ್ರಾಸಾ-4 ರವರ ಮೇಲಿಂದ ಹತ್ತಿಸಿಕೊಂಡು ಹೋಗಿರುತ್ತಾನೆ, ಫ್ರಾಸಾ-6 ರವರನ್ನು ನೆಲಕ್ಕೆ ಕೆಡವಿ ಬಾಟಲಿಯಿಂದ ಹಾಗೂ ಬಡಿಗೆಯಿಂದ ಹೊಡೆದಿರುತ್ತಾರೆ, ಅವರು ಫ್ರಾಸಾ-4 ರವರಿಗೆ ದೂರನ್ನು ಯಾಕೆ ಕೊಟ್ಟಿರುತ್ತೀ ಎಂದು ಹೇಳಿರುತ್ತಾರೆ, ಆಗ ತಾನು, ಚಾಸಾ-14, 15 ಸೇರಿ ಜಗಳವನ್ನು ಬಿಡಿಸಿರುತ್ತೇವೆ, 9, 10 ಮತ್ತು 13 ನೇ ಆರೋಪಿಗಳು ಕೂಡಾ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **26 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆ ದಿನ ಆರೋಪಿಗಳು ಹೊಡೆಯಲು ಉಪಯೋಗಿಸಿದ ಎರಡು ಕಲ್ಲುಗಳು, ಬಾಟಲಿ, ಬಾಟಲಿಯ ಚೂರು, ಬಡಿಗೆ ಇವುಗಳನ್ನು ಮು.ಮಾ.1 ರಿಂದ 3 ಮತ್ತು 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ, ಆ ದಿನ 1 ನೇ ಆರೋಪಿ ಫ್ರಾಸಾ-4 ರವರ ಮೇಲೆ ಹತ್ತಿಸಿಕೊಂಡು ಹೋದ ಬೈಕನ ಭಾವಚಿತ್ರ ನಿಪಿ-4 ಮತ್ತು 5 ರಲ್ಲಿ ಇರುತ್ತದೆ, ನಂತರ ಫ್ರಾಸಾ-2 ಮತ್ತು 4 ರವರನ್ನು ಆ್ಯಂಬುಲೆನ್ಸದಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ, ನಂತರ ಅಲ್ಲಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಕರೆದುಕೊಂಡು ಹೋಗಲಾಗಿರುತ್ತದೆ, ಆ ದಿನ ಹೊಡೆ ಬಡೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಹಾಗೂ ಗೈರು ಹಾಜರ ಇರುವ 2, 4, 5 ಮತ್ತು 12 ನೇ ಆರೋಪಿಗಳಾಗಿರುತ್ತಾರೆ, ಈ ಬಗ್ಗೆ ತಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ತನ್ನ ಹೇಳಿಕೆಯನ್ನು ನಿಪಿ-11 ಎಂದು ಮತ್ತು ಸಂಬಂಧಪಟ್ಟ ನಮೂದನ್ನು ನಿಪಿ-11(ಎ), ನಿಪಿ-11(ಬಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **27 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈ ಘಟನೆಯು ದಿಃ 06.03.2020 ರಂದು ಮದ್ಯಾಹ್ನ 02.00 ಗಂಟೆಗೆ ಫ್ರಾಸಾ-7 ರವರ ಮನೆಯ ಮುಂದೆ ನಡೆದಿರುತ್ತದೆ, ಆ ದಿನ ಫ್ರಾಸಾ-7 ರವರ ಮನೆಯ ಮುಂದೆ ಫ್ರಾಸಾ-2, 4, 6 ಮತ್ತು 7 ರವರು ಮಾತನಾಡುತ್ತಾ ನಿಂತುಕೊಂಡಿದ್ದರು, ತಾನು, ಚಾಸಾ-14, 15 ಕೂಡಾ ಅವರ ಜೊತೆಗೆ ಮಾತನಾಡುತ್ತಾ ನಿಂತುಕೊಂಡಿದ್ದೆವು, ಆಗ 13 ಜನ ಆರೋಪಿಗಳು ಅಲ್ಲಿಗೆ ಬಂದರು, ಅವರ ಕೈಯಲ್ಲಿ ಕಲ್ಲು, ಬಡಿಗೆ, ಬಾಟಲಿ ಮತ್ತು ಮಚ್ಚು ಇದ್ದವು, ಆರೋಪಿಗಳು ಬಂದವರೇ ತಮ್ಮ ಮೇಲೆ ಕೇಸು ಮಾಡುತ್ತೀರಾ ಭೋಸುಡಿ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, 13 ಜನ ಆರೋಪಿಗಳು ಬಂದವರೇ ಫ್ರಾಸಾ-2, 4, 6 ಮತ್ತು 7 ರವರಿಗೆ ತೆಕ್ಕೆ ಬಿದ್ದು ಕೈಗಳಿಂದ ಹೊಡೆ ಬಡೆ ಮಾಡಿರುತ್ತಾರೆ, ಫ್ರಾಸಾ-2 ರವರ ತಲೆಗೆ ದೊಡ್ಡ ಗಾಯ ಆಗಿರುವುದನ್ನು ನೋಡಿರುತ್ತೇನೆ, ಮೂರನೆ ಆರೋಪಿಯು ಸೋಡಾ ಬಾಟಲಿಯಿಂದ ಫ್ರಾಸಾ-6 ರವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ, 4 ನೇ ಆರೋಪಿಯು ಬಡಿಗೆಯಿಂದ ಫ್ರಾಸಾ-2, 4, 6 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾನೆ, ನಂತರ 3 ನೇ ಆರೋಪಿಯು 4 ನೇ ಆರೋಪಿಯಿಂದ ಬಡಿಗೆಯನ್ನು ತೆಗೆದುಕೊಂಡು ಫ್ರಾಸಾ-2, 4, 6 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾನೆ, 7 ನೇ ಆರೋಪಿಯು ಕಲ್ಲಿನಿಂದ ಫ್ರಾಸಾ-6 ರವರಿಗೆ ಹೊಡೆದಿರುತ್ತಾನೆ, ಆಗ ತಾನು, ಚಾಸಾ-9 ರಿಂದ 12, 14 ರಿಂದ 16 ಸೇರಿ ಜಗಳವನ್ನು ಬಿಡಿಸಿರುತ್ತೇವೆ, ಆಗ ಆರೋಪಿಗಳು ಈ ದಿನ ನೀವು ಉಳಿದುಕೊಂಡಿದ್ದೀರಿ, ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಉಳಿಸುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **28 –** ಫ್ರಾಸಾ-**9** ವಸಂತಯ್ಯ ಕುಲಕರ್ಣಿ ಇವರು ತಮ್ಮ ಸಾಕ್ಷಿಯಲ್ಲಿ, ಆರೋಪಿತರು ತೋರಿಸಿ ಹಾಜರಪಡಿಸಿದ ಗುನ್ನೆಗೆ ಬಳಸಿದ ಮೋಟರ ಸೈಕಲ ಮತ್ತು ಆಯಧಗಳ ಜಪ್ತ ಪಂಚನಾಮೆಯ ಮೇಲೆ

ತನ್ನ ಸಹಿ ಇರುತ್ತದೆ, ಸದರಿ ಪಂಚನಾಮೆಯನ್ನು ನಿಪಿ-6 ಎಂದು ಗುರುತಿಸಲಾಗಿದ್ದು, ತನ್ನ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-6(ಬಿ) ಎಂದು ಗುರುತಿಸಲಾಯಿತು, ದಿಃ 08.03.2020 ರಂದು ತಾನು ಮುಂಡರಗಿ ಪೋಲೀಸ ಠಾಣೆಗೆ ಹೋಗಿದ್ದೆನು, ಆಗ ತನ್ನ ಜೊತೆ ಫ್ರಾಸಾ-3 ರವರು ಇದ್ದರು, ಆಗ ಪೋಲೀಸರು ಪಂಚನಾಮೆ ಮಾಡುವುದು ಇದೆ, ಬರಬೇಕೆಂದು ಕರೆದಿರುತ್ತಾರೆ, ತಾನು ಠಾಣೆಗೆ ಹೋದಾಗ, 1 ನೇ ಆರೋಪಿ ಠಾಣೆಯಲ್ಲಿ ಹಾಜರ ಇದ್ದನು, ಆಗ 1 ನೇ ಆರೋಪಿಯು ಮೋಟರ ಸೈಕಲ ನಂ, ಕೆಎ-26/ಆರ್-3832 ನೇದ್ದನ್ನು ತೋರಿಸಿ ಅದು ತನಗೆ ಸೇರಿದ್ದು, ಅದರಿಂದ ಬೇರೆ ಒಬ್ಬರ ಹೊಟ್ಟೆಯ ಮೇಲೆ ಹಾಯಿಸಿರುವುದಾಗಿ ಹೇಳಿರುತ್ತಾನೆ, ಆಗ ಪೋಲೀಸರು ಸದರಿ ಬೈಕನ್ನು ಜಪ್ತ ಮಾಡಿರುತ್ತಾರೆ, ಆ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ, ನಿಪಿ-4 ಮತ್ತು 5 ನ್ನು ಈಗ ನೋಡುತ್ತಿದ್ದು, ಅದರಲ್ಲಿ ಸದರಿ ಬೈಕಿನ ಭಾವಚಿತ್ರ ಇರುತ್ತದೆ, ಸದರಿ ಬೈಕು ಮುಂಡರಗಿ ಪೋಲೀಸ ಠಾಣೆಯ ಆವರಣದಲ್ಲಿ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **29 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಠಾಣೆಯಿಂದ ಪೋಲೀಸರು ತನ್ನನ್ನು ಅತ್ತಿಕಟ್ಟಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಬಲಾಯತಕಟ್ಟಿ ತಾಂಡಾಕ್ಕೆ ಹೋಗುವ ರಸ್ತೆಗೆ ಕರೆದುಕೊಂಡು ಹೋಗಿರುತ್ತಾರೆ, ಆಗ 1 ನೇ ಆರೋಪಿ ಮತ್ತು ಪೋಲೀಸರು ಕೂಡಾ ಇದ್ದರು, 1 ನೇ ಆರೋಪಿಯು ಗುನ್ನಾ ಸ್ಥಳವನ್ನು ತೋರಿಸಿ, ಅಲ್ಲಿಂದ ಒಂದು ಮಚ್ಚನ್ನು ಮತ್ತು ಒಂದು ಬಡಿಗೆಯನ್ನು ಹಾಜರಪಡಿಸಿರುತ್ತಾನೆ, ಆಗ ಪೋಲೀಸರು ಅವುಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಮಾಡಿರುತ್ತಾರೆ, ಆ ಸಮಯದಲ್ಲಿ ನಿಪಿ-7 ರಿಂದ 9 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ, ಅವುಗಳಲ್ಲಿ ತನ್ನ ಮತ್ತು 1 ನೇ ಆರೋಪಿಯ ಭಾವಚಿತ್ರ ಮತ್ತು ಇನ್ನೊಬ್ಬ ಆರೋಪಿಯ ಭಾವಚಿತ್ರಗಳು ಇರುತ್ತವೆ, ಆ ಇನ್ನೊಬ್ಬ ಆರೋಪಿಯ ಹೆಸರನ್ನು ತನಗೆ ಹೇಳಲು ಆಗುವುದಿಲ್ಲ, ಸದರಿ ಮಚ್ಚು ಮತ್ತು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ, ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.4 ಮತ್ತು 5 ಎಂದು ಗುರುತಿಸಲಾಗಿರುತ್ತದೆ, ಮು.ಮಾ.4 ಮತ್ತು 5 ರ ಮೇಲೆ ಅಂಟಿಸಿದ ಚೀಟಿಗಳ ಮೇಲೆ ತನ್ನ ಸಹಿಗಳು ಇರುತ್ತವೆ, ಅವುಗಳನ್ನು ಮು.ಮಾ.4(ಎ) ಮತ್ತು ಮು.ಮಾ.5(ಎ) ಎಂದು ಗುರುತಿಸಲಾಯಿತು, ನಿಪಿ-6 ನ್ನು ಮುಂಡರಗಿ ಠಾಣೆಯಲ್ಲಿ ಬೆಳಿಗ್ಗೆ 10.00 ರಿಂದ 10.30 ರ ವರೆಗೆ ಮಾಡಲಾಗಿರುತ್ತದೆ ಮತ್ತು ಕಬಲಾಯತಕಟ್ಟಿ ತಾಂಡಾದ ರಸ್ತೆಯಲ್ಲಿ ಮದ್ಯಾಹ್ನ 12.00 ರಿಂದ 12.45 ರ ವರೆಗೆ ಮಾಡಲಾಗಿರುತ್ತದೆ, ನಿಪಿ-6 ರ ಮೇಲೆ ಒಂದು ಸಹಿಯನ್ನು ಮುಂಡರಗಿ ಪೋಲೀಸ ಠಾಣೆಯಲ್ಲಿ ಮಾಡಿರುತ್ತೇನೆ ಮತ್ತು ಇನ್ನೊಂದು ಸಹಿಯನ್ನು ಗುನ್ನಾ ಸ್ಥಳದಲ್ಲಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **30 –** ಫ್ರಾಸಾ**-10** ರಮೇಶ ಕುಸಲಾಪುರ ಇವರು ತಮ್ಮ ಸಾಕ್ಷಿಯಲ್ಲಿ, ತನಗೆ ಫ್ರಾಸಾ-2 ರವರು ಪರಿಚಯ ಇರುತ್ತಾರೆ, ಫ್ರಾಸಾ-4, 6, 7, 8, ಚಾಸಾ-9 ರಿಂದ 12, 14, 16 ರವರು ತನಗೆ ಪರಿಚಯ ಇರುತ್ತಾರೆ, ತನಗೆ ಎಲ್ಲ ಆರೋಪಿಗಳ ಪರಿಚಯ ಇರುತ್ತದೆ, ಸುಮಾರು ಮೂರು ವರ್ಷಗಳ ಹಿಂದೆ, ತಾನು, ಚಾಸಾ-14, 16 ಸೇರಿ ಸೊರಟೂರದಿಂದ ಅತ್ತಿಕಟ್ಟಿಗೆ ಹೋಗಿದ್ದೆವು, ಆಗ ಫ್ರಾಸಾ-7 ರವರ ಮನೆಯ ಮುಂದೆ ಫ್ರಾಸಾ-2, 4, 6 ರವರು ಇದ್ದರು, ಆ ಸಮಯದಲ್ಲಿ ಸುಮಾರು 5 - 6 ಜನರು ಬಂದು, ಬೈಕಿನಿಂದ ಫ್ರಾಸಾ-4 ರವರಿಗೆ ಗುದ್ದಿರುತ್ತಾರೆ ಮತ್ತು ಇದರಿಂದಾಗಿ ಫ್ರಾಸಾ-4 ರವರು ಕೆಳಗೆ ಬಿದ್ದಿರುತ್ತಾರೆ, ಆ ಜಗಳದಲ್ಲಿ ಫ್ರಾಸಾ-2 ಮತ್ತು 6 ರವರಿಗೆ ಹೊಡೆ ಬಡೆ ಮಾಡಲಾಗಿರುತ್ತದೆ, ಗಲಾಟೆಯಲ್ಲಿ ಫ್ರಾಸಾ-2 ರವರ ತಲೆಗೆ ಗಾಯಗಳಾಗಿದ್ದು ಮತ್ತು ಫ್ರಾಸಾ-6 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದರು, ಆಗ ತಾನು, ಚಾಸಾ-14, ಫ್ರಾಸಾ-11, ಅಡಿವೆಪ್ಪ ಬಸಪ್ಪ ಕನ್ನೂರ ಸೇರಿ ಗಲಾಟೆಯನ್ನು ಬಿಡಿಸಿರುತ್ತೇವೆ, ನಂತರ ಅವರೆಲ್ಲ ಬೈಕನ್ನು ತೆಗೆದುಕೊಂಡು ಹೋಗಿರುತ್ತಾರೆ, ಫ್ರಾಸಾ-2 ಮತ್ತು 6 ರವರಿಗೆ ಬಾಟಲಿ ಮತ್ತು ಕೋಲಿನಿಂದ ಹೊಡೆದಿರುತ್ತಾರೆ, ಜಗಳವನ್ನು ಬಿಡಿಸಿದ ನಂತರ ತಾನು ಆ್ಯಂಬುಲೆನ್ಸಗೆ ಫೋನ ಮಾಡಿರುತ್ತೇನೆ, ಬಹಳ ಹೊತ್ತಾದರೂ ಆ್ಯಂಬುಲೆನ್ಸ ಬರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **31 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 06.03.2020 ರಂದು ಮಧ್ಯಾಹ್ನ 02.00 ಗಂಟೆ ಸಮಯದಲ್ಲಿ ಫ್ರಾಸಾ-7 ರವರ ಮನೆಯ ಮುಂದೆ ಫ್ರಾಸಾ-2, 4, 6 ಮತ್ತು 7 ರವರು ಮಾತನಾಡುತ್ತಾ ನಿಂತಿದ್ದರು, ಆ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸೇರಿ ಒಟ್ಟು 13 ಜನರು ಅಲ್ಲಿಗೆ ಬಂದಿರುತ್ತಾರೆ, ಅವರೆಲ್ಲರೂ ಫ್ರಾಸಾ-4 ರವರಿಗೆ ತಮ್ಮ ಮೇಲೆ ಕೇಸು ಮಾಡುತ್ತೀರಾ ಎಂದು ಹೇಳಿ ಅವಾಚ್ಯವಾಗಿ ಬೈದಿರುತ್ತಾರೆ, ಆಗ ಫ್ರಾಸಾ-2 ರವರಿಗೆ 1 ನೇ ಆರೋಪಿಯು ಕೊಲೆ ಮಾಡುತ್ತೇನೆ ಎಂದು ಹೇಳಿ ಮಚ್ಚಿನಿಂದ ಅವರ ತಲೆಗೆ ಹೊಡೆದು ರಕ್ತ ಗಾಯಪಡಿಸಿರುತ್ತಾರೆ, ಆಗ ಫ್ರಾಸಾ-4 ರವರ ಹೊಟ್ಟೆಯ ಮೇಲೆ ಮೋಟರ ಸೈಕಲನ್ನು ಹತ್ತಿಸಿಕೊಂಡು ಹೋಗಲಾಗಿರುತ್ತದೆ, ನಂತರ ಎಲ್ಲಾ ಆರೋಪಿಗಳು ಫ್ರಾಸಾ-2, 4 ಮತ್ತು 6 ರವರಿಗೆ ಕೈಯಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **32 –** ಫ್ರಾಸಾ-**11** ಚೆನ್ನಪ್ಪ ಕುಸಲಾಪುರ ಇವರು ತಮ್ಮ ಸಾಕ್ಷಿಯಲ್ಲಿ, ತನಗೆ ಫ್ರಾಸಾ-2, ಫ್ರಾಸಾ-4, ಫ್ರಾಸಾ-6, ಫ್ರಾಸಾ-7, ಚಾಸಾ-9 ರಿಂದ 12 ರವರ ಪರಿಚಯವಿರುತ್ತದೆ, ಫ್ರಾಸಾ-8 ಮತ್ತು ಫ್ರಾಸಾ-10 ರವರ ಪರಿಚಯವಿರುತ್ತದೆ, ತನಗೆ ಎಲ್ಲ ಆರೋಪಿಗಳ ಪರಿಚಯವಿರುತ್ತದೆ, ಸುಮಾರು 3 ವರ್ಷಗಳ ಹಿಂದೆ ಅತ್ತಿಕಟ್ಟಿ ಗ್ರಾಮಕ್ಕೆ ತಾನು, ಫ್ರಾಸಾ-10 ಮತ್ತು ಚಾಸಾ-14 ರವರು ಹೋಗಿದ್ದೆವು, ಅತ್ತಿಕಟ್ಟಿ ಗ್ರಾಮಕ್ಕೆ ತಾನು ತನ್ನ ಮಗಳನ್ನು ಮಾತನಾಡಿಸಲು ಹೋಗಿದ್ದೆ, ಮಧ್ಯಾಹ್ನ 02.00 ಗಂಟೆಯ ಸಮಯದಲ್ಲಿ ಫ್ರಾಸಾ-4 ರವರ ಮನೆಯ ಮುಂದೆ ಫ್ರಾಸಾ-2, ಫ್ರಾಸಾ-4, ಫ್ರಾಸಾ-6 ಮತ್ತು ಫ್ರಾಸಾ-7 ರವರು ಮಾತನಾಡುತ್ತಾ ನಿಂತುಕೊಂಡಿದ್ದಾಗ, ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಅಂದರೆ 1, 6, 9 ರಿಂದ 13 ರವರು ಮತ್ತು ಅವರ ಜೊತೆಗೆ ಈ ದಿನ ಗೈರು ಹಾಜರು ಇರುವ ಆರೋಪಿ ನಂ.2 to 5, 7 and 8 ರವರು ಮತ್ತು ಇನ್ನು ಕೆಲವು ಜನರು ಬಂದಿರುತ್ತಾರೆ, ಆಗ ಬಂದ ಜನರು ಒಟ್ಟು 15 ಜನರಿರುತ್ತಾರೆ, ಅವರ ಕೈಯಲ್ಲಿ ಸೋಡಾ ಬಾಟಲಿ ಮತ್ತು ಚಾಕು ಇದ್ದವು, ಅಗ ಎಲ್ಲ ಆರೋಪಿಗಳು ಫ್ರಾಸಾ-2, ಫ್ರಾಸಾ-4, ಫ್ರಾಸಾ-6 ಮತ್ತು ಫ್ರಾಸಾ-7 ರವರಿಗೆ ಬೈದಾಡಿರುತ್ತಾರೆ ಮತ್ತು ಹೊಡಿ ಬಡಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **33 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಫ್ರಾಸಾ-2 ರವರ ತಲೆಗೆ ಸೋಡಾ ಬಾಟಲಿಯಿಂದ ಹೊಡೆಯಲಾಗಿರುತ್ತದೆ, ಫ್ರಾಸಾ-4 ರವರ ಮೈಮೇಲೆ ಬೈಕನ್ನು ಹಾಯಿಸಿಕೊಂಡು ಹೋಗಿರುತ್ತಾರೆ, ಫ್ರಾಸಾ-6 ರವರು ಕೂಡ ಹೊಡಿ ಬಡಿ ಮಾಡಿರುತ್ತಾರೆ, ನಂತರ, ಫ್ರಾಸಾ-2, ಫ್ರಾಸಾ-4, ಫ್ರಾಸಾ-6 ಮತ್ತು ಫ್ರಾಸಾ-7 ರವರು ಆಸ್ಪತ್ರೆಗೆ ಹೋಗಿರುತ್ತಾರೆ, ಸೋಡಾ ಬಾಟಲಿ, ಒಡೆದ ಸೋಡಾ ಬಾಟಲಿ ಮತ್ತು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ, ಸೋಡಾ ಬಾಟಲಿಯನ್ನು ಮು ಮಾ 2 ಎಂದು, ಒಡೆದ ಸೋಡಾ ಬಾಟಲಿಯನ್ನು ಮು ಮಾ 3 ಎಂದು ಮತ್ತು ಚಾಕು(ಮಚ್ಚು)ನ್ನು ಮು ಮಾ 4 ಎಂದು ಗುರುತಿಸಲಾಗಿರುತ್ತದೆ, ಫ್ರಾಸಾ-4 ರವರಿಗೆ ಹಾಯಿಸಿದ ಬೈಕನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಯು ನಿಪಿ-4 ಮತ್ತು 5 ನ್ನು ತೋರಿಸಲಾಗಿ, ಅದರಲ್ಲಿ ಕಾಣಿಸುವ ಬೈಕನಿಂದಲೇ ಫ್ರಾಸಾ-4 ರವರ ಮೇಲೆ ಹಾಯಿಸಿಕೊಂಡು ಹೋಗಲಾಗಿರುತ್ತದೆ ಎಂದು ಹೇಳಿರುತ್ತಾರೆ, ಪೊಲೀಸರು ತನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **34 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ06.03.2020 ರಂದು ಮಧ್ಯಾಹ್ನ 02.00 ಗಂಟೆಗೆ ಈ ಪ್ರಕರಣದ ಎಲ್ಲ ಆರೋಪಿಗಳು ಫ್ರಾಸಾ-4 ರವರ ಮನೆಯ ಹತ್ತಿರ ಬಂದಿರುತ್ತಾರೆ, ಅವರು ತಮ್ಮ ಕೈಯಲ್ಲಿ ಕಲ್ಲು, ಬಡಿಗೆ, ಮಚ್ಚು ಮತ್ತು ಸೋಡಾ ಬಾಟಲಿಗಳನ್ನು ಹಿಡಿದುಕೊಂಡು ಬಂದಿದ್ದರು, ಎಲ್ಲ ಆರೋಪಿಗಳು ಫ್ರಾಸಾ-2, ಫ್ರಾಸಾ-4, ಫ್ರಾಸಾ-6 ಮತ್ತು ಫ್ರಾಸಾ-7 ರವರಿಗೆ ತಮ್ಮ ಮೇಲೆ ಕೇಸು ಮಾಡುತ್ತೀರಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ ಮತ್ತು ಅವರೆಲ್ಲರೂ ತೆಕ್ಕಿ ಬಿದ್ದು,

ಕೈಯಿಂದ ಹೊಡಿ ಬಡಿ ಮಾಡಿರುತ್ತಾರೆ, 1 ನೇ ಆರೋಪಿಯು ಮು ಮಾ 4 ರಿಂದ ಫ್ರಾಸಾ-2 ರವರ ತಲೆಗೆ ಹೊಡೆದು ಗಾಯಪಡಿಸಿರುತ್ತಾರೆ, 1 ನೇ ಆರೋಪಿಯು ನಿಪಿ-4 ಮತ್ತು 5 ರಲ್ಲಿ ಕಾಣಿಸುವ ಬೈಕನ್ನು ಕೊಲೆ ಮಾಡುವ ಉದ್ದೇಶದಿಂದ ಫ್ರಾಸಾ-4 ರವರ ಮೆಲೆ ಹಾಯಿಸಿಕೊಂಡು ಹೋಗಿರುತ್ತಾರೆ, 3 ನೇ ಆರೋಪಿಯು ಸೋಡಾ ಬಾಟಲಿಯಿಂದ ಫ್ರಾಸಾ-6 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆ, ಮು.ಮಾ-5 ಬಡಿಗೆಯಿಂದ 3 ನೇ ಆರೋಪಿಯು ಫ್ರಾಸಾ-2, 4 ಮತ್ತು ಫ್ರಾಸಾ-6 ರವರಿಗೆ ಹೊಡೆದಿರುತ್ತಾರೆ, ಮು ಮಾ 5 ರಿಂದಲೇ 4 ನೇ ಆರೋಪಿಯು ಫ್ರಾಸಾ-2, 4 ಮತ್ತು ಫ್ರಾಸಾ-6 ರವರಿಗೆ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **35 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಮು ಮಾ 1 ಕಲ್ಲಿನಿಂದ 7 ನೇ ಆರೋಪಿಯು ಫ್ರಾಸಾ-6 ರವರಿಗೆ ಹೊಡೆದಿರುತ್ತಾರೆ, ಮು ಮಾ 1 ರಿಂದಲೇ 13 ನೇ ಆರೋಪಿಯು ಫ್ರಾಸಾ-4 ರವರಿಗೆ ಹೊಡೆದಿರುತ್ತಾಳೆ, ಆಗ, ತಾನು, ಫ್ರಾಸಾ-4, ಚಾಸಾ-9 ರಿಂದ 12, ಫ್ರಾಸಾ-8, ಚಾಸಾ-14, ಫ್ರಾಸಾ-10 ರವರು ಜಗಳವನ್ನು ಬಿಡಿಸಿರುತ್ತೇವೆ, ಬಿಡಿಸಿದ ನಂತರ, ಆರೋಪಿಗಳೆಲ್ಲರೂ ಈ ದಿನ ಉಳಿದುಕೊಂಡಿದ್ದಿರಿ ಮತ್ತು ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿ ಹೋಗಿರುತಾತರೆ, ನಂತರ, ಫ್ರಾಸಾ-2, ಫ್ರಾಸಾ-4 ಮತ್ತು ಫ್ರಾಸಾ-6 ರವರು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ, ದಿಃ 12.06.2020 ರಂದು ಈ ರೀತಿ ತಾನು ಹೇಳಿಕೆಯನ್ನು ಕೊಟ್ಟಿರುತ್ತಾನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **36 –** ಫ್ರಾಸಾ-**12** ಶಕುಂತಲಾ ಪಾಟೀಲ ಇವರು ತಮ್ಮ ಸಾಕ್ಷಿಯಲ್ಲಿ, ಫ್ರಾಸಾ-7 ತನ್ನ ಗಂಡನಿರುತ್ತಾನೆ, ಫ್ರಾಸಾ-2 ಮತ್ತು 4 ರವರು ತನ್ನ ಗಂಡನ ಅಣ್ಣಂದಿರಿರುತ್ತಾರೆ, ಚಾಸಾ-10 ರಿಂದ 12 ರವರು ತನ್ನ ನೆಗೆಣ್ಣಿಯರು ಇರುತ್ತಾರೆ, ತನಗೆ ಫ್ರಾಸಾ-8 ರವರ ಪರಿಚಯ ಇರುತ್ತದೆ, ಈ ಪ್ರಕರಣದ ಎಲ್ಲಾ ಆರೋಪಿಗಳು ತನಗೆ ಪರಿಚಯ ಇರುತ್ತಾರೆ, 1 ನೇ ಆರೋಪಿಯ ತಂದೆಯ ಹೆಸರು ಪರ್ವತಗೌಡ ಪಾಟೀಲ ಇರುತ್ತದೆ, ಸುಮಾರು 4 ವರ್ಷಗಳ ಹಿಂದೆ, ಒಂದು ದಿನ ರಾಶಿಯ ಮೇಲೆ ಹೊದಿಸುವ ತಾಡಪತ್ರಿಯ ಸಲುವಾಗಿ 1 ನೇ ಆರೋಪಿ ಮತ್ತು ಆತನ ತಂದೆ ಹಾಗೂ ಫ್ರಾಸಾ-4 ರವರಿಗೆ ಜಗಳ ಆಗಿತ್ತು, ಈ ವಿಚಾರಕ್ಕೆ ಸಂಬಂಧಿಸಿದಂತೆ, ಫ್ರಾಸಾ-4 ರವರು ಆರೋಪಿಗಳ ವಿರುದ್ಧ ಪೋಲೀಸ ಠಾಣೆಗೆ ದೂರನ್ನು ಕೊಟ್ಟಿದ್ದರು, ಈ ರೀತಿ ದೂರನ್ನು ಕೊಟ್ಟಿದ್ದರಿಂದ ಆರೋಪಿಗಳಿಗೆ ತಮ್ಮ ಮೇಲೆ ಸಿಟ್ಟು ಇತ್ತು, ಸದರಿ ದೂರನ್ನು ಕೊಟ್ಟ ಮಾರನೇ ದಿನ, ಮಧ್ಯಾಹ್ನ 01.30 ರ ಸುಮಾರಿಗೆ ಫ್ರಾಸಾ-2, 4, 6 ರವರು ಸೇರಿ ಫ್ರಾಸಾ-7 ರವರ ಜೊತೆ ಅವರ ಮನೆಯ ಮುಂದೆ ಮಾತನಾಡುತ್ತಾ ನಿಂತುಕೊಂಡಾಗ, ಆರೋಪಿಗಳೆಲ್ಲರೂ ಕೈಯಲ್ಲಿ ಲಾಂಗು, ಮಚ್ಚು, ಕಲ್ಲು, 7 ಅಪ್ ಸೋಡಾ ಬಾಟಲಿ ಮತ್ತು ಬಡಿಗೆಗಳನ್ನು ಹಿಡಿದುಕೊಂಡು 2 – 3 ಮೋಟರ ಸೈಕಲುಗಳನ್ನು ತೆಗೆದುಕೊಂಡು ಜಗಳಕ್ಕೆ ಬಂದಿರುತ್ತಾರೆ, ಆ ಸಮಯದಲ್ಲಿ ತಾನು, ಚಾಸಾ-10 ರಿಂದ 12 ರವರು ಮನೆಯ ಮುಂದೆ ಕೆಲಸ ಮಾಡುತ್ತಿದ್ದೆವು, ಆಗ ಆರೋಪಿಗಳೆಲ್ಲರೂ ತಮ್ಮ ಮೇಲೆ ದೂರನ್ನು ಕೊಟ್ಟಿರುತ್ತೀರಾ ಸೂಳೆಮಕ್ಕಳೆ, ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **37 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ 1 ನೇ ಆರೋಪಿಯು ಮಚ್ಚಿನಿಂದ ಫ್ರಾಸಾ-2 ರವರ ತಲೆಗೆ ಹೊಡೆದಿರುತ್ತಾನೆ, ಆಗ ಫ್ರಾಸಾ-2 ರವರಿಗೆ ತಲೆಗೆ ರಕ್ತ ಗಾಯವಾಗಿರುತ್ತದೆ, ನಂತರ 1 ನೇ ಆರೋಪಿಯು ಬೈಕನ್ನು ತೆಗೆದುಕೊಂಡು ಫ್ರಾಸಾ-4 ರವರಿಗೆ ಡಿಕ್ಕಿ ಪಡಿಸಿ, ಅವರ ಹೊಟ್ಟೆಯ ಮೇಲೆ ಹಾಯಿಸಿಕೊಂಡು ಹೋಗಿರುತ್ತಾನೆ, 3 ನೇ ಆರೋಪಿಯು, 7-ಅಪ್ ಸೋಡಾ ಬಾಟಲಿಯಿಂದ ಫ್ರಾಸಾ-6 ರವರ ತಲೆಗೆ ಚುಚ್ಚಿರುತ್ತಾನೆ, 1 ನೇ ಆರೋಪಿಯು ಬಡಿಗೆಯಿಂದ ಫ್ರಾಸಾ-2, 4 ಮತ್ತು 6 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾನೆ, 3 ನೇ ಆರೋಪಿಯು ಬಡಿಗೆಯಿಂದ ಫ್ರಾಸಾ-2, 4 ಮತ್ತು 6 ರವರಿಗೆ ಹೊಡೆದಿರುತ್ತಾನೆ, 7 ರಿಂದ 13 ನೇ ಆರೋಪಿಗಳು

ಕಲ್ಲುಗಳಿಂದ ಫ್ರಾಸಾ-2, 4 ಮತ್ತು 6 ರವರಿಗೆ ಹೊಡೆದಿರುತ್ತಾರೆ, ಆಗ ತಾನು, ಚಾಸಾ-10 ರಿಂದ 12, ಫ್ರಾಸಾ-7 ಮತ್ತು 8, ಚಾಸಾ-14, ಫ್ರಾಸಾ-10 ಮತ್ತು 11 ರವರು ಜಗಳವನ್ನು ಬಿಡಿಸಿರುತ್ತೇವೆ, ಆಗ ಆರೋಪಿಗಳು ನೀವು ಬಂದಿರುತ್ತೀರಿ ಎಂದು ಬಿಟ್ಟಿರುತ್ತೇವೆ, ಇಲ್ಲದಿದ್ದರೆ ಅವರನ್ನು ಕೊಲೆ ಮಾಡುತ್ತಿದ್ದೆವು ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **38 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಆರೋಪಿಗಳು ಹೊಡೆದಿದ್ದರಿಂದ, ಫ್ರಾಸಾ-2, 4 ಮತ್ತು 6 ರವರಿಗೆ ರಕ್ತಗಾಯಗಳಾಗಿದ್ದು, ನಂತರ ಅವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ, ಈ ಘಟನೆ ಬಗ್ಗೆ ಫ್ರಾಸಾ-2 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ, ದೂರನ್ನು ಕೊಟ್ಟ ನಂತರ ಪೋಲೀಸರು ಮಾರನೇ ದಿನ ಬೆಳಿಗ್ಗೆ 10.30 ಗಂಟೆಗೆ ತಮ್ಮ ಮನೆಯ ಹತ್ತಿರ ಬಂದಿರುತ್ತಾರೆ, ಆಗ ತಾನು ಗುನ್ನಾ ಸ್ಥಳವನ್ನು ಪೋಲೀಸರಿಗೆ ತೋರಿಸಿರುತ್ತೇನೆ, ಪೋಲೀಸರು ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿ, ಸ್ಥಳದಿಂದ ಎರಡು ಹಿಡಿ ಗಾತ್ರದ ಕಲ್ಲು, 7-ಅಪ್ ಕಂಪನಿಯ ಸೋಡಾ ಬಾಟಲಿ, 7-ಅಪ್ ಕಂಪನಿಯ ಸೋಡಾ ಬಾಟಲಿಯ ಒಡೆದ ಚೂರುಗಳನ್ನು ಜಪ್ತ ಮಾಡಿಕೊಂಡಿರುತ್ತಾರೆ, ಸದರಿ ಪಂಚನಾಮೆಗೆ ತಾನು ಸಹಿ ಮಾಡಿರುತ್ತೇನೆ, ಸದರಿ ಪಂಚನಾಮೆಯನ್ನು ನಿಪಿ-1 ಎಂದು, ತನ್ನ ಸಹಿಯನ್ನು ನಿಪಿ-1(ಸಿ) ಎಂದು, ಸದರಿ ವಸ್ತುಗಳನ್ನು ಮು.ಮಾ.1 ರಿಂದ 3 ಎಂದು ಗುರುತಿಸಲಾಗಿರುತ್ತದೆ, ಆ ಸಮಯದಲ್ಲಿ ನಿಪಿ-2 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ಸದರಿ ನಿಪಿ-2 ರಲ್ಲಿ ತನ್ನ ಭಾವಚಿತ್ರ ಇರುತ್ತದೆ, ನಿಪಿ-1 ನ್ನು ಬೆಳಿಗ್ಗೆ 10.00 ರಿಂದ 11.00 ರ ವರೆಗೆ ಮಾಡಲಾಗಿರುತ್ತದೆ, ಈ ಬಗ್ಗೆ ಪೋಲೀಸರು ತನ್ನನ್ನು ವಿಚಾರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **39 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** 1 ನೇ ಆರೋಪಿಯು ಫ್ರಾಸಾ-4 ರವರಿಗೆ ಡಿಕ್ಕಿ ಪಡಿಸಿ, ಅವರ ಹೊಟ್ಟೆಯ ಮೇಲೆ ಹಾಯಿಸಿಕೊಂಡು ಹೋದ ಬೈಕನ ಭಾವಚಿತ್ರ ನಿಪಿ-4 ಮತ್ತು 5 ರಲ್ಲಿ ಸದರಿ ಬೈಕಿನ ಭಾವಚಿತ್ರ ಇರುತ್ತದೆ, ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ಮು.ಮಾ.4 ಎಂದು ಮತ್ತು ಹೊಡೆಯಲು ಉಪಯೋಗಿಸಿದ ಬಡಿಗೆಯನ್ನು ಮು.ಮಾ.5 ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **40 –** ಫ್ರಾಸಾ**-13** ಅವಿನಾಶಸಿಂಗ ಬ್ಯಾಳಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 07.03.2020 ರಂದು, ಚಾಸಾ-26 ರವರು ತನಗೆ ಮತ್ತು ಚಾಸಾ-18 ರವರಿಗೆ ಈ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿ ಠಾಣೆಗೆ ಕರೆತರುವಂತೆ ಆದೇಶ ಮಾಡಿರುತ್ತಾರೆ, ಆ ಪ್ರಕಾರ ತಾನು ಹಾಗೂ ಚಾಸಾ-18 ರವರು ಬೆಟಗೇರಿಯ ಗೌರಿ ಗುಡಿ ಓಣಿಗೆ ಹೋಗಿ 1 ಮತ್ತು 3 ನೇ ಆರೋಪಿಗಳನ್ನು ಹಿಡಿಯಲು ಹೋದಾಗ, ಅವರು ಮೋಟರ ಸೈಕಲ ಮೇಲೆ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ, ಆಗ ತಾವು ಅವರನ್ನು ಮೋಟರ ಸೈಕಲ ಸಮೇತ ಹಿಡಿದುಕೊಂಡು ಬಂದು ಚಾಸಾ-26 ರವರ ಮುಂದೆ ಹಾಜರಪಡಿಸಿರುತ್ತೇವೆ, ಈ ಬಗ್ಗೆ ತಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ, ಸದರಿ ಬೈಕನ್ನು ಹಾಗೂ 1 ಮತ್ತು 3 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ, ನಿಪಿ-4 ಮತ್ತು 5 ರಲ್ಲಿ ಸದರಿ ಬೈಕು ಕಂಡುಬರುತ್ತದೆ, ಸದರಿ ಫೋಟೋಗಳಲ್ಲಿ 1 ನೇ ಆರೋಪಿಯ ಭಾವಚಿತ್ರ ಕೂಡಾ ಇರುತ್ತದೆ, ನಿಪಿ-7 ರಿಂದ 10 ರಲ್ಲಿ 1 ಮತ್ತು 3 ನೇ ಆರೋಪಿಗಳ ಭಾವಚಿತ್ರ ಇರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **41 –** ಫ್ರಾಸಾ**-14** ಈಶ್ವರಪ್ಪ ಕೆರಿಮನಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 12.03.2020 ರಂದು, ಚಾಸಾ-26 ರವರು ತನಗೆ ಮತ್ತು ಪಿಸಿ 366 ರವರಿಗೆ ಈ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿ ಠಾಣೆಗೆ ಕರೆತರುವಂತೆ ಆದೇಶ ಮಾಡಿರುತ್ತಾರೆ, ಆ ಪ್ರಕಾರ ತಾನು ಹಾಗೂ ಪಿಸಿ 366 ರವರು ಅದೇ ದಿನ ಗದಗ ಬೆಟಗೇರಿಯ ಗೌರಿ ಗುಡಿ ಓಣಿಗೆ ಹೋಗಿ 11

ನೇ ಆರೋಪಿಯನ್ನು ಆತನ ಮನೆಯ ಮುಂದೆ ಬೆಳಿಗ್ಗೆ 09.30 ಗಂಟೆ ಸುಮಾರಿಗೆ ಹಿಡಿದುಕೊಂಡು ಬಂದು ಚಾಸಾ-26 ರವರ ಮುಂದೆ ಬೆಳಿಗ್ಗೆ 11.45 ಗಂಟೆಗೆ ಹಾಜರಪಡಿಸಿರುತ್ತೇವೆ, ಈ ಬಗ್ಗೆ ತಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ, 11 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಸದರಿ 11 ನೇ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **42 – ಫ್ರಾಸಾ-15** ಚಂದ್ರಪ್ಪ ಈಟಿ ಇವರು ತಮ್ಮ ಸಾಕ್ಷಿಯಲ್ಲಿ, ದಿಃ 06.03.2020 ರಂದು ಮಧ್ಯಾಹ್ನ 03.00 ಗೆ ಗದಗ ಜಿಲ್ಲಾ ಆಸ್ಪತ್ರೆಯಿಂದ ಫ್ರಾಸಾ-2 ಮತ್ತು ಫ್ರಾಸಾ-6 ರವರು ಹೊಡೆದಾಟದ ಹಿನ್ನಲೆಯಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುತ್ತಾರೆ ಎಂದು ಫೋನ್ ಕರೆ ಬಂದಿರುತ್ತದೆ, ಆಗ ತಾನು ಎ ಎಸ್ ಐ, ಜೋಗದಂಡಕರರವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕಳಿಸಿಕೊಟ್ಟಿರುತ್ತೇನೆ, ಅಲ್ಲಿ ಸದರಿ ಎ ಎಸ್ ಐ, ಜೋಗದಂಡಕರ ಇವರು ಫ್ರಾಸಾ-2 ರವರಿಂದ ದೂರನ್ನು ಪಡೆದುಕೊಂಡು ಠಾಣೆಗೆ ಬಂದು ತನ್ನ ಮುಂದೆ ಹಾಜರುಪಡಿಸಿರುತ್ತಾರೆ, ಸದರಿ ದೂರನ್ನು ನಿಪಿ-3 ಎಂದು ಮತ್ತು ತನ್ನ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು, ಸದರಿ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ನಂ, 41/2020 ಕಲಂ 143, 147, 148, 323, 324, 307, 504, 506 ಸಹವಾಚಕ ಕಲಂ.149 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಮೂಲ ದೂರನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ, ಪ್ರಥಮ ವರ್ತಮಾನ ವರದಿಯನ್ನು ನಿಪಿ-13 ಎಂದು ಮತ್ತು ತನ್ನ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **43 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ07.03.2020 ರಂದು ಹತ್ತಿಕಟ್ಟಿ ಗ್ರಾಮದ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ, ಫ್ರಾಸಾ-12 ರವರು ತೋರಿಸಿದ ಸ್ಥಳದಲ್ಲಿ ಫ್ರಾಸಾ-1 ಮತ್ತು ಫ್ರಾಸಾ-5 ರವರ ಸಮಕ್ಷಮ ನಿಪಿ-1 ರಂತೆ ಗುನ್ನಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10.00 – 11.00 ಯ ನಡುವೆ ಮಾಡಿರುತ್ತೇನೆ ಮತ್ತು ಆ ಸಮಯದಲ್ಲಿ ಎರಡು ಹಿಡಿ ಗಾತ್ರದ ಕಲ್ಲುಗಳನ್ನು, ಸೆವೆನ್ ಅಪ್ ಕಂಪನಿಯ ಸೋಡಾ ಬಾಟಲ್, ಸೋಡಾ ಬಾಟಲಿಯ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ, ಅವುಗಳನ್ನು ಮು.ಮಾ1 ರಿಂದ 3 ಎಂದು ಗುರುತಿಸಲಾಗಿರುತ್ತದೆ, ಆ ಸಮಯದಲ್ಲಿ, ನಿಪಿ-2 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ನಂತರ, ಅದೇ ದಿನ ಫ್ರಾಸಾ-12, ಚಾಸಾ-10, ಚಾಸಾ-11, ಚಾಸಾ-12, ಫ್ರಾಸಾ-7 ಮತ್ತು ಫ್ರಾಸಾ-8 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, ಫ್ರಾಸಾ-8 ರವರು ತನ್ನ ಮುಂದೆ ನಿಪಿ-11 ರಂತೆ ಹೇಳಿಕೆಯನ್ನು ಕೊಟ್ಟಿರುತ್ತಾರೆ, ನಂತರ, ಅದೇ ದಿನ ತಾನು ಮತ್ತು ಚಾಸಾ-23 ರವರು ಸೇರಿ ಆರೋಪಿತರನ್ನು ಹುಡುಕಾಡಿದ್ದು, ಅವರು ಸಿಕ್ಕಿರುವುದಿಲ್ಲ, ನಂತರ, ಅದೇ ದಿನ ಆರೋಪಿತರನ್ನು ಮತ್ತು ಕೃತ್ಯಕ್ಕೆ ಬಳಸಿದ್ದ ಮೋಟಾರ್ ಸೈಕಲನ್ನು ಪತ್ತೆ ಹಚ್ಚಲು ಸಿಬ್ಬಂದಿಯನ್ನು ನೇಮಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **44 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ 07.03.2020 ರಂದು ರಾತ್ರಿ 09.15 ಕ್ಕೆ 1 ಮತ್ತು 3 ನೇ ಆರೋಪಿಗಳನ್ನು ಹಾಗೂ ಕೃತ್ಯಕ್ಕೆ ಬಳಸಿದ್ದ ಮೋಟಾರ್ ಸೈಕಲ್ ನಂ.ಕೆಎ 26 ಆರ್ 3832 ನ್ನು ತಮ್ಮ ಸಿಬ್ಬಂದಿಯವರು ತಂದು ಹಾಜರುಪಡಿಸಿರುತ್ತಾರೆ, ದಿಃ 08.03.2020 ರಂದು 1 ಮತ್ತು 3 ನೇ ಆರೋಪಿಗಳನ್ನು ವಿಚಾರಣೆ ಮಾಡಿ, ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದಿರುತ್ತೇನೆ, 1 ಮತ್ತು 3 ನೇ ಆರೋಪಿಗಳ ಸ್ವಖುಷಿ ಹೇಳಿಕೆಯನ್ನು ನಿಪಿ-14 ಮತ್ತು 15 ಎಂದು ಕ್ರಮವಾಗಿ ಗುರುತಿಸಲಾಯಿತು ಎಂದು ನಿಪಿ-14 ರ ಮೇಲಿರುವ 1 ನೇ ಆರೋಪಿಯ ಸಹಿಯನ್ನು ನಿಪಿ-14(ಎ) ಎಂದು ತನ್ನ ಸಹಿಯನ್ನು ನಿಪಿ-14 (ಬಿ) ಎಂದು ಮತ್ತು ಸಂಬಂಧಪಟ್ಟ ನಮೂದನ್ನು ನಿಪಿ-14(ಸಿ) ಎಂದು, ನಿಪಿ-15 ರ ಮೇಲಿರುವ 3 ನೇ ಆರೋಪಿಯ ಸಹಿಯನ್ನು ನಿಪಿ-15(ಎ) ಎಂದು ತನ್ನ ಸಹಿಯನ್ನು ನಿಪಿ-15(ಬಿ) ಎಂದು ಮತ್ತು ಸಂಬಂಧಪಟ್ಟ ನಮೂದನ್ನು ನಿಪಿ-15(ಸಿ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **45 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅದೇ ದಿನ 7 ನೇ ಆರೋಪಿಯನ್ನು ಚಾಸಾ-20 ಮತ್ತು ಪಿಸಿ - 366 ರವರು ತಂದು ಹಾಜರುಪಡಿಸಿದ್ದು, ಅವರನ್ನು ವಿಚಾರಿಸಿ, ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದಿರುತ್ತೇನೆ, ನಂತರ ಅದೇ ದಿನ ಫ್ರಾಸಾ-3 ಮತ್ತು 9 ರವರನ್ನು ಠಾಣೆಗೆ ಕರೆಸಿಕೊಂಡು ಅವರ ಸಮಕ್ಷಮ ಮೋಟಾರ್ ಸೈಕಲ್ ನಂ.ಕೆಎ 26 ಆರ್ 3832 ನ್ನು ಬೆಳಿಗ್ಗೆ 10.00 – 10.30 ರವರೆಗೆ ಅಮಾನತ್ತುಪಡಿಸಿಕೊಂಡು, ನಿಪಿ-6 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ, ಆ ಸಮಯದಲ್ಲಿ ನಿಪಿ-4 ಮತ್ತು 5 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ, ನಂತರ ಅದೇ ದಿನ 1 ಮತ್ತು 3 ನೇ ಆರೋಪಿತರ ಹೇಳಿಕೆಯ ಆಧಾರ ಮೇಲೆ 1 ಮತ್ತು 3 ನೇ ಆರೋಪಿಗಳು, ತನ್ನನ್ನು, ಪಂಚರನ್ನು ಮತ್ತು ತಮ್ಮ ಸಿಬ್ಬಂದಿಯವರನ್ನು ಅತ್ತಿಕಟ್ಟಿ ಗ್ರಾಮದಿಂದ ಕಬಲಾಯತಕಟ್ಟಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿದ್ದ 1 ನೇ ಆರೋಪಿಯು ಹೊಲದ ಬದುವಿನಲ್ಲಿಂದ ಒಂದು ಮಚ್ಚನ್ನು ಮತ್ತು ಒಂದು ಬಡಿಗೆಯನ್ನು ತೆಗೆದು ತನ್ನ ಮುಂದೆ ಹಾಜರುಪಡಿಸಿರುತ್ತಾನೆ, ಅವುಗಳನ್ನು ಪಂಚರ ಸಮಕ್ಷಮ ಬೆಳಿಗ್ಗೆ 11.30 ರಿಂದ 12.30 ರವರೆಗೆ ನಿಪಿ-6 ರಂತೆ ಪಂಚನಾಮೆಯನ್ನು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ, ಆ ಸಮಯದಲ್ಲಿ ನಿಪಿ-7 ರಿಂದ 9 ರಂತೆ ಫೋಟೋಗಳನ್ನು ತೆಗೆಯಲಾಗಿರುತ್ತದೆ, ನಿಪಿ-6 ರ ಮೇಲಿರುವ ತನ್ನ ಸಹಿಯನ್ನು ನಿಪಿ-6 (ಸಿ) ಎಂದು ಗುರುತಿಸಲಾಯಿತು ಎಂದು ಸದರಿ ಮಚ್ಚನ್ನು ಮತ್ತು ಬಡಿಗೆಗಳನ್ನು ಮು.ಮಾ-4 ಮತ್ತು 5 ಎಂದು ಗುರುತಿಸಲಾಗಿರುತ್ತದೆ, ನಂತರ ತಾವೆಲ್ಲರೂ ವಾಪಾಸ್ ಠಾಣೆಗೆ ಬಂದಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **46 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ, ಅದೇ ದಿನ 1, 3 ಮತ್ತು 7 ನೇ ಆರೋಪಿಗಳ ವೈದ್ಯಕೀಯ ಪರೀಕ್ಷೆ ಮಾಡಿಸಿ, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, 1, 3 ಮತ್ತು 7 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ, 1 ನೇ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾರೆ, 7 ನೇ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾರೆ, ನಂತರ ಅದೇ ದಿನ ಚಾಸಾ-18, 20 ಮತ್ತು ಫ್ರಾಸಾ-13 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, ದಿಃ11.03.2020 ರಂದು ಫ್ರಾಸಾ-2 ಮತ್ತು ಫ್ರಾಸಾ-6 ರವರ ಹೇಳಿಕೆಯನ್ನು ಪಡೆಯಲು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಗೆ ಹೋಗಿರುತ್ತೇನೆ, ಅಲ್ಲಿ ಫ್ರಾಸಾ-2 ರವರ ಮರುಹೇಳಿಕೆಯನ್ನು ಮತ್ತು ಫ್ರಾಸಾ-6 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ, ನಂತರ ಅದೇ ದಿನ ಮುಂದಿನ ತನಿಖೆಯನ್ನು ಚಾಸಾ-27 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **47 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ15.03.2020 ರಂದು ಪುನಃ ಚಾಸಾ-27 ರವರಿಂದ ತನಿಖೆಯನ್ನು ವಹಿಸಿಕೊಂಡಿರುತ್ತೇನೆ, ದಿಃ 25.03.2020 ರಂದು ಫ್ರಾಸಾ-4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿಃ12.06.2020 ರಂದು ಆರೋಪಿ ನಂ.4, 5, 6 ಹಾಗೂ 8 ರಿಂದ 10 ರವರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಹಾಜರಾಗಿದ್ದು, ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತೇನೆ, ಅವರನ್ನು ನೋಡಿದರೆ ಗುರುತಿಸುತ್ತೇನೆ, 4 ನೇ ಆರೋಪಿಯು ಈಗ ಮೃತಪಟ್ಟಿರುತ್ತಾರೆ, 5, 8, 10 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ, 6, 9 ನೇ ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾರೆ, ನಂತರ ಅದೇ ದಿನ, ಚಾಸಾ-14, ಫ್ರಾಸಾ-10 ಮತ್ತು ಫ್ರಾಸಾ-11 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, 12 ಮತ್ತು 13 ನೇ ಆರೋಪಿಗಳು ರವರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಹಾಜರಾಗಿದ್ದು, ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತೇನೆ, ಅವರನ್ನು ನೋಡಿದರೆ ಗುರುತಿಸುತ್ತೇನೆ, ಆರೋಪಿ ನಂ.13 ರವರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **48 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ08.08.2020 ರಂದು ಚಾಸಾ-22 ಮತ್ತು 23 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ, ಈ ಪ್ರಕರಣದಲ್ಲಿ ಚಾಸಾ-22 ರವರು ಠಾಣೆಯ ಕ್ಯಾಂಡಿ ಕ್ಯಾಮೆರಾದಿಂದ ಪಂಚನಾಮೆಯ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ ಮತ್ತು ಫೋಟೋಗಳನ್ನು ಡಿ.ವಿ.ಡಿಗೆ ಅಳವಡಿಸಿರುತ್ತಾರೆ, ತನಗೆ ಪದೋನ್ನತಿ ಮೇರೆಗೆ ವರ್ಗಾವಣೆಯಾಗಿದ್ದುದ್ದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-27 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **49 –** ಫ್ರಾಸಾ-**16** ಫಕ್ಕೀರಪ್ಪ ಮಣ್ಣೂರ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣದ ಮುಂದಿನ ತನಿಖೆಯನ್ನು ದಿಃ11.03.2020 ರಂದು ಫ್ರಾಸಾ-15 ರವರಿಂದ ವಹಿಸಿಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಮುಂದುವರೆಸಿರುತ್ತೇನೆ, ನಂತರ ಅದೇ ದಿನ ಫ್ರಾಸಾ-14 ಮತ್ತು ಪಿಸಿ - 366 ರವರನ್ನು 11 ನೇ ಆರೋಪಿಯನ್ನು ಹಿಡಿದುಕೊಂಡು ಬರಲು ತಿಳಿಸಿರುತ್ತೇನೆ, ದಿಃ12.03.2020 ರಂದು ಫ್ರಾಸಾ-14 ಮತ್ತು ಪಿಸಿ - 366 ರವರು 11 ನೇ ಆರೋಪಿತನನ್ನು ಬೆಳಿಗ್ಗೆ 09.30 ಕ್ಕೆ ಹಿಡಿದುಕೊಂಡು ಬಂದು ತನ್ನ ಮುಂದೆ ಬೆಳಿಗ್ಗೆ 11.30 ಕ್ಕೆ ಹಾಜರುಪಡಿಸಿರುತ್ತಾರೆ, ನಂತರ ಅವರನ್ನು ದಸ್ತಗಿರ ಮಾಡಿ ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, 11 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ನಂತರ ಅದೇ ದಿನ ಫ್ರಾಸಾ-14 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **50 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ15.03.2020 ರಂದು ಫ್ರಾಸಾ-15 ರವರು ಪುನಃ ಕರ್ತವ್ಯಕ್ಕೆ ಬಂದಿದ್ದು, ಅವರಿಗೆ ಮುಂದಿನ ತನಿಖೆಯನ್ನು ವಹಿಸಿಕೊಟ್ಟಿರುತ್ತೇನೆ, ದಿಃ08.08.2020 ರಂದು ಫ್ರಾಸಾ-15 ರವರು ಪದೋನ್ನತಿ ಹೊಂದಿ ವರ್ಗಾವಣೆಯಾಗಿದ್ದುದ್ದರಿಂದ, ಅವರಿಂದ ತನಿಖೆಯನ್ನು ಪುನಃ ವಹಿಸಿಕೊಂಡಿರುತ್ತೇನೆ, ನಂತರ ಅದೇ ದಿನ ನ್ಯಾಯಾಲಯದ ಆದೇಶದಂತೆ ಜಪ್ತಾದ ಕೆ ಎ 26 / ಆರ್ 3832 ನ್ನು ಅದರ ಆರ್ ಸಿ ಮಾಲೀಕರಿಗೆ ಬಿಟ್ಟುಕೊಟ್ಟಿರ್ರತ್ತೇನೆ, ಆಗ ತಾನು ಪಾವತಿ ಬೇಸ್ಮಿಯನ್ನು ಮತ್ತು ಆರ್ ಸಿ ಪುಸ್ತಕದ ಝುರಾಕ್ಸ್ ನಕಲನ್ನು ಪಡೆದುಕೊಂಡಿರುತ್ತೇನೆ, ಪಾವತಿ ಬೇಸ್ಮಿಯನ್ನು ನಿಪಿ-16 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-16(ಎ) ಎಂದು 11 ನೇ ಆರೋಪಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು ಎಂದು ಆರ್ ಸಿ ಪುಸ್ತಕದ ಝುರಾಕ್ಸ ನಕಲನ್ನು ನಿಪಿ-17 ಎಂದು, ತನ್ನ ಸ್ವೀಕೃತಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು ಎಂದು ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆಯಲಾಗಿರುತ್ತದೆ, ಸದರಿ ಫೋಟೋಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು, ನಿಪಿ-18 ಮತ್ತು 19 ರಲ್ಲಿರುವ ದ್ವಿಚಕ್ರ ವಾಹನವನ್ನು ಅದರಲ್ಲಿ ಕಾಣಿಸುವ 11 ನೇ ಆರೋಪಿಯ ಮಧ್ಯಂತರ ಸ್ವಾಧೀನಕ್ಕೆ ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **51 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ02.09.2020 ರಂದು ಪಿಸಿ ನಂ.441 ರವರನ್ನು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಯಿಂದ ಎರಡು ಗಾಯದ ಪ್ರಮಾಣಪತ್ರಗಳನ್ನು ತೆಗೆದುಕೊಂಡು ಬಂದು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಗಾಯದ ಪ್ರಮಾಣ ಪತ್ರಗಳನ್ನು ನಿಪಿ-20 ಮತ್ತು 21 ಎಂದು ಮತ್ತು ಸಾಕ್ಷಿಯ ಸ್ವೀಕೃತಿ ಸಹಿಗಳನ್ನು ನಿಪಿ-20(ಎ) ಮತ್ತು ನಿಪಿ-21(ಎ) ಎಂದು ಗುರುತಿಸಲಾಯಿತು, ದಿಃ03.09.2020 ರಂದು ಫ್ರಾಸಾ-4 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-22 ಎಂದು ಮತ್ತು ತನ್ನ ಸ್ವೀಕೃತಿ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು, ದಿಃ08.09.2020 ರಂದು ಮು.ಮಾ-1 ರಿಂದ 5 ವಸ್ತುಗಳನ್ನು ವೈದ್ಯರಿಗೆ ಕಳುಹಿಸಿ ಅವುಗಳಿಂದ ಹೊಡೆದರೆ ನಿಪಿ-20 ರಿಂದ 22 ರಲ್ಲಿ ನಮೂದಿಸಿದ ಗಾಯಗಳು ಆಗಬಹುದೋ ಎನ್ನುವ ಬಗ್ಗೆ ಪ್ರಮಾಣ ಪತ್ರ ನೀಡಲು ಕೋರಿರುತ್ತೇನೆ, ತಾನು ಬರೆದ ಪತ್ರವನ್ನು ನಿಪಿ-23 ಎಂದು ತನ್ನ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **52 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ದಿಃ09.09.2020 ರಂದು ಸದರಿ ಮು.ಮಾ-1 ರಿಂದ 5 ರಿಂದ ಹೊಡೆದರೆ ಸದರಿ ಗಾಯದ ಪ್ರಮಾಣಪತ್ರದಲ್ಲಿ ಕಾಣಿಸಿದ ಗಾಯಗಳು ಆಗುತ್ತವೆ ಎಂದು ಹಿಂಬರಹವನ್ನು ನಿಪಿ-23 ರ ಹಿಂಬದಿಯಲ್ಲಿ ಮಾಡಿಕೊಟ್ಟಿರುತ್ತಾರೆ, ಸದರಿ ಹಿಂಬರಹವನ್ನು ನಿಪಿ-24 ಎಂದು ತನ್ನ ಸ್ವೀಕೃತಿ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು, ನಂತರ ಅದೇ ದಿನ ಫ್ರಾಸಾ-2 ಮತ್ತು 6 ರವರ ಅಂತಿಮ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದರಿ ಗಾಯದ ಪ್ರಮಾಣಪತ್ರಗಳನ್ನು ನಿಪಿ-25 ಮತ್ತು 26 ಎಂದು ತನ್ನ ಸ್ವೀಕೃತಿ ಸಹಿಗಳನ್ನು ನಿಪಿ-25(ಎ) ಮತ್ತು ನಿಪಿ-26(ಎ) ಎಂದು ಗುರುತಿಸಲಾಯಿತು ಮತ್ತು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾಗಿರುವ ಕಾರಣ, ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **53 –** ಫ್ರಾಸಾ**-17** ಡಾಃ ಗವಿಸಿದ್ದಪ್ಪ ಪಲ್ಲೇದ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, 06.03.2020 ರಂದು ಮಧ್ಯಾಹ್ನ 03.30 ರ ಸುಮಾರಿಗೆ ಫ್ರಾಸಾ-2 ಹಲ್ಲೆಯ ಇತಿಹಾಸದೊಂದಿಗೆ ತಮ್ಮ ಆಸ್ಪತ್ರೆಗೆ ಬಂದರು, ಸದರಿಯವರ ಪರೀಕ್ಷೆಯಲ್ಲಿ - 1) ಪ್ಯಾರಿಟಲ್ ಪ್ರದೇಶದಲ್ಲಿ ನೆತ್ತಿಯ ಮೇಲೆ 5X1 ಸೆಂ.ಮೀ ಅಳತೆಯ ಕತ್ತರಿಸಿದ ಸೀಳಿರುವ ಗಾಯ ಕಂಡು ಬಂದಿರುತ್ತದೆ, CT ಸ್ಕ್ಯಾನ್ ವರದಿಯು ಸಾಮಾನ್ಯವಾಗಿದೆ ಎಂದು ತೋರಿಸುತ್ತದೆ, ಗಾಯವು ಪ್ರಕೃತಿಯಲ್ಲಿ ಸರಳವಾಗಿದೆ ಎಂದು ತಾನು ಅಭಿಪ್ರಾಯಪಡುತ್ತೇನೆ, ಗಾಯದ ವಯಸ್ಸು 6 ಗಂಟೆಗಳಿಗಿಂತ ಕಡಿಮೆ, ಈ ನಿಟ್ಟಿನಲ್ಲಿ, ತಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ, ಅದನ್ನು ನಿಪಿ-25 ಎಂದು ಮತ್ತು ತನ್ನ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಗಿದೆ, ನಿಪಿ-25 ನಲ್ಲಿ ಉಲ್ಲೇಖಿಸಲಾದ ಗಾಯವು ಮು ಮಾ-4 ಮಚ್ಚಿನಿಂದ ಹಲ್ಲೆ ಮಾಡಿದರೆ ಉಂಟಾಗಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **54 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈ ಪ್ರಕರಣಕ್ಕೆ ಸಂಬಂಧಿಸಿದಂತೆ, 06.03.2020 ರಂದು ಮಧ್ಯಾಹ್ನ 03.30 ರ ಸುಮಾರಿಗೆ ಫ್ರಾಸಾ-6 ಹಲ್ಲೆಯ ಇತಿಹಾಸದೊಂದಿಗೆ ತಮ್ಮ ಆಸ್ಪತ್ರೆಗೆ ಬಂದಿದ್ದು, ಸದರಿಯವರ ಪರೀಕ್ಷೆಯಲ್ಲಿ - 1) ತಲೆಯ ಪ್ಯಾರಿಟಲ್ ಪ್ರದೇಶದ ಮೇಲೆ 6X1 ಸೆಂ.ಮೀ ಅಳತೆಯ ಕತ್ತರಿಸಿದ ಗಾಯ, ಕೆಂಪು ಬಣ್ಣ, 2) ಎದೆಯ ಎಡಭಾಗದಲ್ಲಿ ಮೃದುತ್ವವಿದೆ ಎಂದು ಕಂಡು ಬಂದಿರುತ್ತದೆ, ಎಕ್ಸ್-ರೇ ವರದಿಯು ಯಾವುದೇ ಮುರಿತವನ್ನು ತೋರಿಸುವುದಿಲ್ಲ, ಗಾಯ ಸಂಖ್ಯೆ 1 ಮತ್ತು 2 ಸರಳ ಸ್ವರೂಪದ್ದಾಗಿವೆ ಎಂದು ತಾನು ಅಭಿಪ್ರಾಯಪಡುತ್ತೇನೆ, ಗಾಯದ ವಯಸ್ಸು 6 ಗಂಟೆಗಳಿಗಿಂತ ಕಡಿಮೆ, ಈ ನಿಟ್ಟಿನಲ್ಲಿ, ತಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ, ಅದನ್ನು ನಿಪಿ-26 ಎಂದು ಮತ್ತು ತನ್ನ ಸಹಿಯನ್ನು ನಿಪಿ-26(ಬಿ) ಎಂದು ಗುರುತಿಸಲಾಗಿದೆ, ನಿಪಿ-26 ನಲ್ಲಿ ಉಲ್ಲೇಖಿಸಲಾದ ಗಾಯ ಸಂಖ್ಯೆ 1 ಮು ಮಾ-3- ಮುರಿದ ಸೋಡಾ ಬಾಟಲಿಯಿಂದ ಹಲ್ಲೆ ಮಾಡಿದರೆ ಉಂಟಾಗಬಹುದು, ನಿಪಿ-26 ನಲ್ಲಿ ಉಲ್ಲೇಖಿಸಲಾದ ಗಾಯ ಸಂಖ್ಯೆ 2 ಮು ಮಾ-1- ಕಲ್ಲು ಮತ್ತು ಮು ಮಾ-5- ಕೋಲಿನಿಂದ ಹಲ್ಲೆ ಮಾಡಿದರೆ ಉಂಟಾಗಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **55 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಈ ಪ್ರಕರಣಕ್ಕೆ ಸಂಬಂಧಿಸಿದಂತೆ, 06.03.2020 ರಂದು ಮಧ್ಯಾಹ್ನ 03.30 ರ ಸುಮಾರಿಗೆ ಫ್ರಾಸಾ-4 ಹಲ್ಲೆಯ ಇತಿಹಾಸದೊಂದಿಗೆ ತಮ್ಮ ಆಸ್ಪತ್ರೆಗೆ ಬಂದರು, ಸದರಿಯವರ ಪರೀಕ್ಷೆಯಲ್ಲಿ - 1) ತಲೆಯ ಬಲಭಾಗದ ತಾತ್ಕಾಲಿಕ ಪ್ರದೇಶದ ಮೇಲೆ 4 X 2 ಸೆಂ.ಮೀ ಕೆಂಪು ಬಣ್ಣದ ಸವೆತ, 2) ಹೊಟ್ಟೆಯ ಮರದ ಪ್ರದೇಶದಲ್ಲಿ ನೋವು ಕಂಡು

ಬಂದಿರುತ್ತದೆ, CT ಸ್ಕ್ಯಾನ್ ವರದಿಯಲ್ಲಿ ಯಾವುದೇ ಮುರಿತ ಮತ್ತು ಯಾವುದೇ ಆಂತರಿಕ ಅಂಗಗಳಿಗೆ ಯಾವುದೇ ಗಾಯವಿಲ್ಲ ಎಂದು ತೋರಿಸಲಾಗಿದೆ, ಗಾಯ ಸಂಖ್ಯೆ 1 ಮತ್ತು 2 ಸರಳ ಸ್ವಭಾವದ್ದಾಗಿದೆ ಎಂದು ತಾನು ಅಭಿಪ್ರಾಯಪಡುತ್ತೇನೆ, ಗಾಯದ ವಯಸ್ಸು 6 ಗಂಟೆಗಳಿಗಿಂತ ಕಡಿಮೆ, ಈ ನಿಟ್ಟಿನಲ್ಲಿ, ತಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ, ಅದನ್ನು ನಿಪಿ-22 ಎಂದು ಮತ್ತು ತನ್ನ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಗಿದೆ, ನಿಪಿ-22 ರಲ್ಲಿ ಉಲ್ಲೇಖಿಸಲಾದ ಗಾಯ ಸಂಖ್ಯೆ 1 ಮು ಮಾ-5- ಕೋಲಿನಿಂದ ಹಲ್ಲೆ ಮಾಡಿದರೆ ಉಂಟಾಗಬಹುದು, ನಿಪಿ-22 ರಲ್ಲಿ ಉಲ್ಲೇಖಿಸಲಾದ ಗಾಯ ಸಂಖ್ಯೆ 2 ನಿಪಿ-4 ಮತ್ತು 5 ರಲ್ಲಿ ಕಂಡುಬರುವ ಮೋಟಾರ್ ಬೈಕ್ ವ್ಯಕ್ತಿಯ ಹೊಟ್ಟೆಯ ಮೇಲೆ ಹರಿದರೆ ಉಂಟಾಗಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **56 –** ಫ್ರಾಸಾ-**18** ಉಮೇಶ ಲಮಾಣಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 07.03.2020 ರಂದು, ಫ್ರಾಸಾ-15 ರವರು ಗುನ್ನಾ ಜಾಗದ ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಯಬೇಕಾಗಿದ್ದು ತಮ್ಮ ಜೊತೆಗೆ ಬರಬೇಕೆಂದು ತನಗೆ ಆದೇಶವನ್ನು ಮಾಡಿರುತ್ತಾರೆ, ಆಗ ತಾನು ತಮ್ಮ ಠಾಣೆಗೆ ಒದಗಿಸಿದ ಹ್ಯಾಂಡಿ ಕ್ಯಾಮೆರಾವನ್ನು ತೆಗೆದುಕೊಂಡು ಫ್ರಾಸಾ-15 ರವರ ಜೊತೆಗೆ ಹತ್ತಿಕಟ್ಟಿ ಗ್ರಾಮಕ್ಕೆ ಹೋಗಿ, ಫ್ರಾಸಾ-15 ರವರು ಗುನ್ನಾ ಜಾಗದ ಪಂಚನಾಮೆ ಮಾಡಿದ್ದು, ಆಗ ತಾನು ಫೋಟೋವನ್ನು ತೆಗೆದಿರುತ್ತೇನೆ, ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಗಿರುತ್ತದೆ, ದಿಃ 08.03.2020 ರಂದು, ಈ ಪ್ರಕರಣಕ್ಕೆ ಸಂಬಂಧಿಸಿದ ದ್ವಿ-ಚಕ್ರ ವಾಹವನ್ನು ಒಬ್ಬ ಆರೋಪಿ ಹಾಜರಪಡಿಸಿದ್ದು, ಆಗ ಫ್ರಾಸಾ-15 ರವರು ಅದನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಮಾಡಿದ್ದು, ಆಗ ತಾನು ಫೋಟೋಗಳನ್ನು ತೆಗೆದಿರುತ್ತೇನೆ, ಸದರಿ ಫೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಗಿರುತ್ತದೆ, ನಿಪಿ-4 ಮತ್ತು 5 ರಲ್ಲಿ ಕಾಣಿಸುವ ಆರೋಪಿಯು ಸದರಿ ಮೋಟರ ಸೈಕಲನ್ನು ಹಾಜರಪಡಿಸಿರುತ್ತಾನೆ, ಸದರಿ ದ್ವಿ-ಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ, ನಿಪಿ-4 ಮತ್ತು 5 ರಲ್ಲಿ ಕಾಣಿಸುವ ದ್ವಿ-ಚಕ್ರ ವಾಹನವನ್ನು ಆರೋಪಿ ಹಾಜರಡಿಸಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **57 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಅದೇ ದಿನ, ಫ್ರಾಸಾ-15 ರವರು ಆರೋಪಿಗಳು ಹಾಜರಪಡಿಸುವ ಆಯುಧಗಳನ್ನು ಅಮಾನತ್ತುಪಡಿಸಿಕೊಳ್ಳಲಾಗುತ್ತಿದ್ದು ಮತ್ತು ಅವುಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಫೋಟೋಗಳನ್ನು ತೆಗೆಯಬೇಕಾಗುತ್ತದೆ ಎಂದು ತನ್ನನ್ನು ಹತ್ತಿಕಟ್ಟಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿತರ ಹೊಲದಲ್ಲಿ ಕಲ್ಲಿನ ಕುಟ್ರಿಯಲ್ಲಿ ಮುಚ್ಚಿಟ್ಟಿದ್ದ ಒಂದು ಮಚ್ಚನ್ನು ಹಾಗೂ ಒಂದು ಬಡಿಗೆಯನ್ನು ಆರೋಪಿಗಳು ಹಾಜರಪಡಿಸಿದ್ದು, ಆಗ ಫ್ರಾಸಾ-15 ರವರು ಅವುಗಳನ್ನು ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ, ಆಗ ತಾನು ಫೋಟೋಗಳನ್ನು ತೆಗೆದಿರುತ್ತೇನೆ, ಸದರಿ ಫೋಟೋಗಳನ್ನು ನಿಪಿ-7 ರಿಂದ 10 ಎಂದು ಗುರುತಿಸಲಾಗಿರುತ್ತದೆ, ನಿಪಿ-7 ರಿಂದ 10 ರಲ್ಲಿ ಕಾಣಿಸುವ ಆರೋಪಿಯು ಸದರಿ ಆಯುಧಗಳನ್ನು ಹಾಜರಪಡಿಸಿರುತ್ತಾನೆ, ಆರೋಪಿ ಹಾಜರಪಡಿಸಿದ ಮಚ್ಚು ಹಾಗೂ ಬಡಿಗೆಯನ್ನು ಮು.ಮಾ.4 ಮತ್ತು 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **58 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ನಂತರ ಫೋಟೋಗಳನ್ನು ಸಿ.ಡಿ.ಗೆ ವರ್ಗಾಯಿಸಿ, ಸದರಿ ಸಿ.ಡಿ.ಯನ್ನು ಫ್ರಾಸಾ-15 ರವರಿಗೆ ಕೊಟ್ಟಿರುತ್ತೇನೆ, ತಾನು ತಯಾರಿಸಿ ಕೊಟ್ಟ ಸಿ.ಡಿ.ಯನ್ನು ನಿಪಿ-27 ಎಂದು ಗುರುತಿಸಲಾಯಿತು, ಈ ಬಗ್ಗೆ ತಾನು ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ, ತಾನು ನಿರ್ವಹಿಸಿದ ಕರ್ತವ್ಯದ ಬಗ್ಗೆ ಫ್ರಾಸಾ-15 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ, ತಾನು ಕೊಟ್ಟ 65(ಬಿ) ಪ್ರಮಾಣ ಪತ್ರವನ್ನು ನಿಪಿ-31 ಎಂದು ಮತ್ತು ತನ್ನ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **59 – ಫ್ರಾಸಾ-19** ಡಾಃ ವೆಂಕಟೇಶ ಮೂಲಿಮನಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, 07.03.2020 ರಂದು ಮಧ್ಯಾಹ್ನ 03.30 ರ ಸುಮಾರಿಗೆ ಫ್ರಾಸಾ-2 ಮತ್ತು ಫ್ರಾಸಾ-6 ಹಲ್ಲೆಯ ಇತಿಹಾಸದೊಂದಿಗೆ ತಮ್ಮ ಆಸ್ಪತ್ರೆಗೆ ಬಂದರು, ಫ್ರಾಸಾ-2 ಮತ್ತು 6 ಗದಗದ GIMS ನಲ್ಲಿ ಚಿಕಿತ್ಸೆ ಪಡೆದ ನಂತರ ಸ್ವತಃ ತಮ್ಮ ಆಸ್ಪತ್ರೆಗೆ ಬಂದರು ಮತ್ತು ಅವರನ್ನು ತಮ್ಮ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು, ಫ್ರಾಸಾ-2 ಮತ್ತು 6 ಜನರನ್ನು 19.03.2020 ರಂದು ತಮ್ಮ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು, ತಾನು ಫ್ರಾಸಾ-2 ಮತ್ತು ಫ್ರಾಸಾ-6 ಗೆ ಚಿಕಿತ್ಸೆ ನೀಡಿದ್ದೇನೆ, 11.03.2020 ರಂದು, ಪೊಲೀಸರು ತಮ್ಮ ಆಸ್ಪತ್ರೆಗೆ ಬಂದು ಫ್ರಾಸಾ-2 ಮತ್ತು ಫ್ರಾಸಾ-6 ತಮ್ಮ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿದ್ದಾರೋ ಇಲ್ಲವೋ ಎಂದು ವಿನಂತಿಯನ್ನು ನೀಡಿದರು, ಪೊಲೀಸರು ನೀಡಿದ ವಿನಂತಿಯನ್ನು ನಿಪಿ-28 ಎಂದು ಗುರುತಿಸಲಾಗಿದೆ, ನಿಪಿ-28 ನ ಹಿಂಭಾಗದಲ್ಲಿ, ಫ್ರಾಸಾ-2 ಮತ್ತು ಫ್ರಾಸಾ-6 ತಮ್ಮ ಹೇಳಿಕೆಯನ್ನು ನೀಡಲು ಸಮರ್ಥವಾಗಿವೆ ಎಂದು ತಾನು ಅನುಮೋದಿಸಿದ್ದೇನೆ, ತನ್ನ ಅನುಮೋದನೆಯನ್ನು ನಿಪಿ-29 ಎಂದು ಮತ್ತು ತನ್ನ ಸಹಿಯನ್ನು ನಿಪಿ-29(ಎ) ಎಂದು ಹಾಗೂ ತಾನು ನೀಡಿದ ಫ್ರಾಸಾ-2 ಗಾಯದ ಪ್ರಮಾಣಪತ್ರವನ್ನು ನಿಪಿ-20 ಎಂದು ಮತ್ತು ತನ್ನ ಸಹಿಯನ್ನು ಈಗ ನಿಪಿ-20(ಬಿ) ಎಂದು ಗುರುತಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **60 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಫ್ರಾಸಾ-2 ಪರೀಕ್ಷೆಯಲ್ಲಿ -1) ಹೊಲಿಗೆ ಮಾಡಿದ ಗಾಯದ ನೆತ್ತಿ (ಹಿಂಭಾಗದ ಪ್ರದೇಶ) ಬಹು ಮೃದು ಅಂಗಾಂಶದ ಗಾಯಗಳು ಕಂಡು ಬಂದಿದ್ದು, ಫ್ರಾಸಾ-2 ಗೆ ಉಂಟಾದ ಗಾಯಗಳು ಪ್ರಕೃತಿಯಲ್ಲಿ ಸರಳವಾಗಿವೆ ಎಂದು ತಾನು ಅಭಿಪ್ರಾಯಪಡುತ್ತೇನೆ, ಮು ಮಾ-4 ಮಚ್ಚಿನಿಂದ ಹಲ್ಲೆ ಮಾಡಿದರೆ ಫ್ರಾಸಾ-2 ಗೆ ಉಂಟಾದ ಗಾಯಗಳು ಉಂಟಾಗಬಹುದು, ತಾನು ನೀಡಿದ ಫ್ರಾಸಾ-6 ಗಾಯದ ಪ್ರಮಾಣಪತ್ರವನ್ನು ನಿಪಿ-21 ಎಂದು ಮತ್ತು ತನ್ನ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **62 –** ಅದೇ ಸಾಕ್ಷಿ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ**,** ಫ್ರಾಸಾ-6 ಪರೀಕ್ಷೆಯಲ್ಲಿ - 1) ನೆತ್ತಿಯ ಗಾಯ, 2) ಭುಜದ ಮೃದು ಅಂಗಾಂಶದ ಗಾಯ ಕಂಡು ಬಂದಿದ್ದು, ಫ್ರಾಸಾ-6 ಗೆ ಉಂಟಾದ ಗಾಯಗಳು ಸರಳ ಸ್ವರೂಪದ್ದಾಗಿವೆ ಎಂದು ತಾನು ಅಭಿಪ್ರಾಯಪಡುತ್ತೇನೆ, ಮು ಮಾ-1- ಕಲ್ಲು, ಮು ಮಾ- 2 - ಸೋಡಾ ಬಾಟಲ್, ಮು ಮಾ-5- ಕೋಲಿನಿಂದ ಹಲ್ಲೆ ಮಾಡಿದರೆ ಫ್ರಾಸಾ-6 ಗೆ ಉಂಟಾದ ಗಾಯಗಳು ಉಂಟಾಗಬಹುದು, ಫ್ರಾಸಾ-2 ಮತ್ತು ಫ್ರಾಸಾ-6 ಗೆ ನೀಡಿದ ಚಿಕಿತ್ಸೆ ಬಗ್ಗೆ ತಾನು ಪೊಲೀಸರಿಗೆ ನೀಡಿದ ಪತ್ರವನ್ನು ನಿಪಿ-30 ಎಂದು ಮತ್ತು ತನ್ನ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **63 – ಫ್ರಾಸಾ-20** ಜಾಫರ ಬಚ್ಚೇರಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 08.03.2020 ರಂದು ಫ್ರಾಸಾ-15 ರವರು ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಬೇಕೆಂದು ತನಗೆ ಹಾಗೂ ಪಿಸಿ 366 ರವರಿಗೆ ಆದೇಶವನ್ನು ಮಾಡಿರುತ್ತಾರೆ, ಆ ಪ್ರಕಾರ ಅದೇ ದಿನ ತಾನು ಹಾಗೂ ಪಿಸಿ 366 ರವರು ಸೇರಿ ಹತ್ತಿಕಟ್ಟಿ ಗ್ರಾಮಕ್ಕೆ ಹೋಗಿದ್ದು, ಅಲ್ಲಿ ಪರಿಶೀಲನೆ ಮಾಡಿ ನೋಡಿ, ಅಲ್ಲಿದ್ದ 7ನೇ ಆರೋಪಿಯನ್ನು ಹಿಡಿದುಕೊಂಡು ಬಂದು ಫ್ರಾಸಾ-15 ರವರ ಮುಂದೆ ಹಾಜರಪಡಿಸಿರುತ್ತೇವೆ, 7ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾನೆ, ಈ ಬಗ್ಗೆ ಫ್ರಾಸಾ-15 ರವರ ಮುಂದೆ ತಾನು ಹೇಳಿಕೆಯನ್ನು ಕೊಟ್ಟಿರುತ್ತಾನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **64 – ಫ್ರಾಸಾ-21** ಉಮೇಶ ಉಪ್ಪಾರ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 02.09.2020 ರಂದು, ಫ್ರಾಸಾ-16 ರವರು ತನ್ನನ್ನು ತತ್ವದರ್ಶಿ ಆಸ್ಪತ್ರೆ ಹುಬ್ಬಳ್ಳಿಗೆ ಗಾಯದ ಪ್ರಮಾಣ ಪತ್ರ ತರಲು ಕಳಿಸಿರುತ್ತಾರೆ, ಆ ಪ್ರಕಾರ ತಾನು ಅದೇ ದಿನ ತತ್ವದರ್ಶಿ ಆಸ್ಪತ್ರೆ ಹುಬ್ಬಳ್ಳಿಗೆ ಹೋಗಿ ಗಾಯದ ಪ್ರಮಾಣ ಪತ್ರಗಳನ್ನು ತಂದು ಫ್ರಾಸಾ-16 ರವರ ಮುಂದೆ ಹಾಜರಪಡಿಸಿರುತ್ತೇನೆ, ಸದರಿ ಗಾಯದ ಪ್ರಮಾಣ ಪತ್ರಗಳನ್ನು ನಿಪಿ-20 ಮತ್ತು 21 ಎಂದು ಗುರುತಿಸಲಾಗಿರುತ್ತದೆ, ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ತಾನು ಹೇಳಿಕೆಯನ್ನು ಕೊಟ್ಟಿರುತ್ತಾನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **65 – ಫ್ರಾಸಾ-22** ಮಾರುತಿ ಜೋಗದಂಡಕರ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿಃ 06.03.2020 ರಂದು ತಾನು ಠಾಣೆಯಲ್ಲಿದ್ದಾಗ, ಫ್ರಾಸಾ-15 ರವರು ಅತ್ತಿಕಟ್ಟಿ ಗ್ರಾಮದಲ್ಲಿ ಗಲಾಟೆಯಾಗಿ, ಗಾಯಾಳುಗಳು ಗದಗ ಜಿಮ್ಸನಲ್ಲಿ ದಾಖಲಾಗಿರುತ್ತಾರೆ ಅಲ್ಲಿಗೆ ಹೋಗಬೇಕೆಂದು ತನಗೆ ಆದೇಶ ಮಾಡಿದ್ದರ ಮೇರೆಗೆ, ತಾನು ಗದಗ ಜಿಲ್ಲಾ ಆಸ್ಪತ್ರೆಗೆ ಹೋದಾಗ, ಅಲ್ಲಿ ಫ್ರಾಸಾ-2, 4 ಮತ್ತು ಫ್ರಾಸಾ-6 ರವರು ದಾಖಲಾಗಿದ್ದರು, ಫ್ರಾಸಾ-2 ರವರ ಹೇಳಿಕೆಯ ದೂರನ್ನು ಫ್ರಾಸಾ-7 ರವರು ಬರೆದು, ಅದಕ್ಕೆ ಫ್ರಾಸಾ-7 ರವರು ದಸ್ತೂರ ಸಹಿ ಮಾಡಿ, ಸದರಿ ದೂರನ್ನು ತನಗೆ ಕೊಟ್ಟಿರುತ್ತಾರೆ, ಸದರಿ ದೂರನ್ನು ನಿಪಿ-3 ಎಂದು, ನಿಪಿ-3 ರಲ್ಲಿರುವ ಫ್ರಾಸಾ-2 ರವರ ಸಹಿಯನ್ನು ನಿಪಿ-3(ಎ) ಎಂದು, ನಿಪಿ-3 ಕ್ಕೆ ಫ್ರಾಸಾ-7 ರವರು ಕೂಡಾ ದಸ್ತೂರ ಸಹಿ ಮಾಡಿದ್ದು ಅದನ್ನು ನಿಪಿ-3(ಬಿ) ಎಂದು ಮತ್ತು ನಿಪಿ-3 ಕ್ಕೆ ತಾನು ಸಹಿ ಮಾಡಿದ್ದು, ಸದರಿ ತನ್ನ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು ಹಾಗೂ ದೂರನ್ನು ಪಡೆದುಕೊಂಡು ಹೋಗಿ, ಫ್ರಾಸಾ-15 ರವರ ಮುಂದೆ ಹಾಜರಪಡಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **66 – ಫ್ರಾಸಾ-23** ಸಂಗಪ್ಪ ಹಲವಾಗಲಿ ಇವರು ತಮ್ಮ ಸಾಕ್ಷಿಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕಃ 12.03.2020 ರಂದು ಫ್ರಾಸಾ-15 ರವರು ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಬೇಕೆಂದು ತನಗೆ ಮತ್ತು ಎಎಸ್ಐ ಐ.ಪಿ, ಕೆರಿಮನಿ ಇವರಿಗೆ ಆದೇಶ ಮಾಡಿದ್ದರು, ಆ ಪ್ರಕಾರ ಅದೇ ದಿನ, ತಾನು ಹಾಗೂ ಎಎಸ್ಐ ಐ.ಪಿ, ಕೆರಿಮನಿ ರವರು ಆರೋಪಿಗಳ ಪತ್ತೆ ಕುರಿತು ಬೆಟಗೇರಿಯ ಗೌರಿಗುಡಿ ಓಣಿಯಲ್ಲಿರುವ 11 ನೇ ಆರೋಪಿಯ ಮನೆಗೆ ಹೋಗಿದ್ದು, ಅಲ್ಲಿದ್ದ 11 ನೇ ಆರೋಪಿಯನ್ನು ಹಿಡಿದುಕೊಂಡು ಬಂದು ಫ್ರಾಸಾ-15 ರವರ ಮುಂದೆ ಹಾಜರಪಡಿಸಿರುತ್ತೇವೆ, ತಾವು ಹಿಡಿದುಕೊಂಡು ಬಂದ 11 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾನೆ ಮತ್ತು ಈ ಬಗ್ಗೆ ತನಿಖಾಧಿಕಾರಿಗಳಿಗೆ ತಾನು ಹೇಳಿಕೆಯನ್ನು ಕೊಟ್ಟಿರುತ್ತಾನೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ **67 –** ಈ ಕೇಸಿನ ಬಗ್ಗೆ ಏನಾದರೂ ಹೇಳುವುದು ಇದೆಯೆ?

ಉತ್ತರಃ ಇಲ್ಲ

ಪ್ರಶ್ನೆ **68 –** ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೆ?

ಉತ್ತರಃ ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಅರ್ಥ ಮಾಡಿಸಿ ಮತ್ತು ಆರೋಪಿಯ ಉತ್ತರವನ್ನು ತೆರೆದ

ನ್ಯಾಯಾಲಯದಲ್ಲಿ ನನ್ನಿಂದ ರೆಕಾರ್ಡ ಮಾಡಲಾಯಿತು, ದಿಃ **26.11.2025.**)

NAGAVENI Digitally signed by NAGAVENI
Date: 2025.12.01 15:22:36 +0000

**(ನಾಗವೇಣಿ)**
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು**,**
ಗದಗ**.**

ಆರೋಪಿಯ ಸಹಿಃ